11 October 2026 Sunday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

info.varthaman@gmail.com

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಅಂತರಂಗ ಸಂತೋಷ ಹೊಂದುವ ಕೆಲಸಗಳು, ಮನಸ್ಸಿಗೆ ಸದಾ ಸಂತೃಪ್ತಿ, ಉಲ್ಲಾಸ ನೀಡುತ್ತವೆ!

ಸ್ನೇಹಾ ಆನಂದ್




9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು

ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 293 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3




ಶ್ರೀ ಡಿ. ಕೆ. ಶಿವಕುಮಾರ್
ಸನ್ಮಾನ್ಯ ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ



ಡಾ. ಜಿ. ಪರಮೇಶ್ವರ
ಮಾನ್ಯ ಉಪಮುಖ್ಯಮಂತ್ರಿಗಳು



ನಾಡಹಬ್ಬ
ಮೈಸೂರು ದಸರಾ - 2026
11 - 21 ಅಕ್ಟೋಬರ್

ನಾಡದೇವತೆ ಶ್ರೀ ಚಾಮುಂಡೇಶ್ವರಿ ದೇವಿಯ ಅಗ್ರಪೂಜೆಯೊಂದಿಗೆ
2026ರ ದಸರಾ ಮಹೋತ್ಸವದ

ಭವ್ಯ ಉದ್ಘಾಟನಾ ಸಮಾರಂಭ

ದಿವ್ಯ ಸಾನಿಧ್ಯ ಹಾಗೂ ಉದ್ಘಾಟನೆ

ಶ್ರೀ ಮ.ನಿ.ಪ್ರ.ಜ. ಅಭಿನವ ಶ್ರೀ ಗವಿಸಿದ್ಧೇಶ್ವರ ಮಹಾಸ್ವಾಮಿಗಳು
ಸಂಸ್ಥಾನ ಶ್ರೀ ಗವಿಮಠ, ಕೊಪ್ಪಳ

ದಿನಾಂಕ: 11.10.2026, ಭಾನುವಾರ

ಶುಭ ಮುಹೂರ್ತ: ಬೆಳಗ್ಗೆ 11:50 ರಿಂದ 12:13 ರೊಳಗೆ ಸಲ್ಲುವ ಶುಭ ಧನುರ್ ಲಗ್ನದಲ್ಲಿ

ಸ್ಥಳ: ಶ್ರೀ ಚಾಮುಂಡೇಶ್ವರಿ ದೇವಿ ಸನ್ನಿಧಿ, ಚಾಮುಂಡಿ ಬೆಟ್ಟ , ಮೈಸೂರು

ಮೈಸೂರು ದಸರಾ – ಭುವನ ಸುಂದರಾ
ಅರಮನೆ ನಗರಕ್ಕೆ ಬನ್ನಿ, ವಿಶ್ವವೈಭವ ಕಣ್ತುಂಬಿಕೊಳ್ಳಿ

ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

CMofKarnataka | https://dipr.karnataka.gov.in/ | Karnatakavarthe | ಕರ್ನಾಟಕ ವಾರ್ತೆ

# ಮೊದಲ ಪುಟದಿಂದ

## ರಾಜಮನೆತನದ ಖಾಸಗಿ ದರ್ಬಾರ್

ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್‌ಗೆ ಕಂಕಣಧಾರಣೆ ನಡೆಯಲಿದೆ. ತದನಂತರ ಬೆಳಿಗ್ಗೆ 11:45ರಿಂದ 12:05ರವರೆಗೆ ಸಿಂಹಾಸನಾರೋಹಣದೊಂದಿಗೆ ಅರಮನೆಯಲ್ಲಿ ಖಾಸಗಿ ದರ್ಬಾರ್ ಅಧಿಕೃತವಾಗಿ ಆರಂಭವಾಗಲಿದೆ. ಚಾಮುಂಡಿಬೆಟ್ಟದ ಸಂಪ್ರದಾಯದಂತೆ ಧಾರ್ಮಿಕ ಕೈಂಕರ್ಯ ನಡೆಯಲಿವೆ.

ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಕಂಕಣ ಧಾರಣೆ ಮಾಡಿ ಬಳಿಕ ರಾಜಪೋಷಾಕಿನಲ್ಲಿ ರಾಜಪರಂಪರೆಯ ಧಾರ್ಮಿಕ ಕಾರ್ಯಕ್ರಮ ನಡೆಸುವರು. ನಂತರ ಎಲ್ಲಾ ದೇವಾಲಯಗಳಿಂದ ಬಂದ ತೀರ್ಥ ಪ್ರಸಾದಗಳನ್ನು ಪಡೆದು 1:40 ರಿಂದ 02:05ರ ವರೆಗೆ ಚಾಮುಂಡಿ ತಾಯಿಯನ್ನು ಚಾಮುಂಡೇಶ್ವರಿ ತೊಟ್ಟಿಯಿಂದ ಕನಕ ತೊಟ್ಟಿಗೆ ತಂದು ನವರಾತ್ರಿ ವಿಜಯದಶಮಿ ವರೆಗೆ ಪೂಜೆ ಮಾಡಲಾಗುತ್ತದೆ. ಪ್ರತಿನಿತ್ಯ ಪಟ್ಟದ ಕುದುರೆ, ಪಟ್ಟದ ಹಸು, ಪಟ್ಟದ ಒಂಟೆ, ಪಟ್ಟದ ಆನೆ ಹಾಗೂ ರಾಜಮನೆತನದ ಹೆಣ್ಣು ಆನೆಗಳನ್ನು ಕೋಡಿ ಸೋಮೇಶ್ವರ ದೇವಾಲಯದಿಂದ ಆನೆ ಬಾಗಿಲಿನ ಮೂಲಕ ಕಲ್ಯಾಣ ತೊಟ್ಟಿಗೆ ತಂದು ಪೂಜೆ ಮಾಡಲಾಗುವುದು. ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ರಾಜವಂಶಸ್ಥರಿಂದ ರತ್ನಖಚಿತ ಸಿಂಹಾಸನಕ್ಕೆ ಪೂಜೆ ಹಾಗೂ ಖಾಸಗಿ ದರ್ಬಾರ್ ನಡೆಯಲಿದೆ. ರಾಜವಂಶಸ್ಥನಾಗಿ ಪಟ್ಟಾಭಿಷೇಕಗೊಂಡ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮೊದಲ ಬಾರಿಗೆ 2015ಲ್ಲಿ ಸಿಂಹಾಸನ ಏರಿ ದರ್ಬಾರ್ ನಡೆಸಿದ್ದರು. 2026ರ ಈ ದಸರೆಯಲ್ಲಿ ಅವರು 12 ಯಶಸ್ವಿ ಖಾಸಗಿ ದರ್ಬಾರ್ ನಡೆಸಲಿದ್ದಾರೆ. ನವರಾತ್ರಿಯ ಅಕ್ಟೋಬರ್ 16ರಂದು ಸರಸ್ವತಿ ಪೂಜೆ, ಅಕ್ಟೋಬರ್ 17ರಂದು ಕಾಳರಾತ್ರಿ ಪೂಜೆ ಹಾಗೂ ಅಕ್ಟೋಬರ್ 20ರಂದು ಆಯುಧಪೂಜೆ ಹಾಗೂ 21ರಂದು ವಿಜಯದಶಮಿ ನಡೆಯಲಿದೆ. ವಿಜಯದಶಮಿ ದಿನದಂದು ರಾಜವಂಶಸ್ಥರ ಖಾಸಗಿ ದಸರಾ ಮುಕ್ತಾಯವಾಗಲಿದೆ.

## ಅರಮನೆ ಪ್ರವೇಶ ನಿರ್ಬಂಧ

ಹೊಂದಿರುವವರಿಗೆ ಮಾತ್ರ ಪ್ರವೇಶವಿರಲಿದೆ. ರತ್ನ ಸಿಂಹಾಸನ ವಿಸರ್ಜನೆ ಹಾಗೂ ಭದ್ರತಾ ಕೊಠಡಿಗೆ ಸ್ಥಳಾಂತರಿಸುವ ಪ್ರಕ್ರಿಯೆ ಹಿನ್ನೆಲೆಯಲ್ಲಿ ನವೆಂಬರ್ 19ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 12ರವರೆಗೆ ಪ್ರವೇಶ ಇರುವುದಿಲ್ಲ. ನಾಡಹಬ್ಬ ದಸರಾ ಮಹೋತ್ಸವ ಪ್ರಯುಕ್ತ ಮೈಸೂರು ಅರಮನೆ ಆವರಣದಲ್ಲಿ ಪ್ರತಿದಿನ ಸಂಜೆ 7ರಿಂದ 8ರವರೆಗೆ ನಡೆಯುವ ಧ್ವನಿ ಮತ್ತು ಬೆಳಕು ಕಾರ್ಯಕ್ರಮವನ್ನು ನವೆಂಬರ್ 1ರವರೆಗೆ ತಾತ್ಕಾಲಿಕವಾಗಿ ರದ್ದುಗೊಳಿಸಲಾಗಿದೆ.

## ನ್ಯಾಯಾಂಗ ನಿಂದನೆ ಅರ್ಜಿ

ಸರ್ಕಾರ ನಿಯಂತ್ರಿತ ರೀತಿಯಲ್ಲಿ ರೈಲು ಸೇವೆಗಳು ಮತ್ತು ಮೆಟ್ರೋ ಸೇವೆಗಳನ್ನು ಮುಂದುವರಿಸಲು ಅನುಮತಿಸಬೇಕು ಎಂದು ಸುಪ್ರೀಂ ಕೋರ್ಟ್ ಆದೇಶಿಸಿತ್ತು.

## 21ರಂದು ಜಂಬೂಸವಾರಿ

ಸಂಜೆ 6:30ಕ್ಕೆ ವಿದ್ಯುತ್ ದೀಪಾಲಂಕಾರ ಹಸಿರು ಚಪ್ಪರ, ರಾತ್ರಿ 7 ಗಂಟೆಗೆ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ ಆವರಣದಲ್ಲಿ ವಸ್ತು ಪ್ರದರ್ಶನ, ಮೈಸೂರು ಅರಮನೆ ವೇದಿಕೆಯಲ್ಲಿ ನೃತ್ಯರೂಪಕ: ದೇವಿ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಗುತ್ತದೆ. ಅ.12ರ ಸೋಮವಾರ ರಾತ್ರಿ 7 ಗಂಟೆಗೆ ಅರಮನೆ ವೇದಿಕೆಯಲ್ಲಿ ರಘು ದೀಕ್ಷಿತ್ ಮತ್ತು ತಂಡದ ತತ್ವ ಸಂಗೀತ (ಸಮಕಾಲೀನ) ಕಾರ್ಯಕ್ರಮ ನಡೆಯಲಿದೆ. ಅ.20ರ ಮಂಗಳವಾರ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಪಂಜಿನ ಕವಾಯತು ಪೂರ್ವಾಭ್ಯಾಸ ನಡೆಯಲಿದೆ.

ಅಕ್ಟೋಬರ್ 21ರ ಬುಧವಾರ ಮಧ್ಯಾಹ್ನ 1:36ರಿಂದ 1:56 ರವರೆಗೆ ಸಲ್ಲುವ ಶುಭ ಮಕರ ಲಗ್ನದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅರಮನೆ ಬಲರಾಮ ದ್ವಾರದ ಬಳಿ ನಂದಿಧ್ವಜಕ್ಕೆ ಪೂಜೆ ಸಲ್ಲಿಸುವ ಮೂಲಕ ಜಂಬೂಸವಾರಿ ಮೆರವಣಿಗೆಗೆ ಚಾಲನೆ ಸಿಗಲಿದೆ. ನಂತರ ಸಂಜೆ 4:10ರಿಂದ 4:35ರವರೆಗೆ ಸಲ್ಲುವ ಶುಭ ಮೀನ ಲಗ್ನದಲ್ಲಿ ಅರಮನೆ ಒಳಾವರಣದಲ್ಲಿ ಅಂಬಾರಿ ಮೇಲೆ ಆಸೀನ ಶ್ರೀ ಚಾಮುಂಡೇಶ್ವರಿ ತಾಯಿಗೆ ಸಿಎಂ ಸೇರಿದಂತೆ ಗಣ್ಯರು ಪುಷ್ಪಾರ್ಚನೆ ನಡೆಸಲಿದ್ದಾರೆ. ಜಂಬೂಸವಾರಿ ಮೆರವಣಿಗೆ ನಂತರ ಬನ್ನಿಮಂಟಪದಲ್ಲಿ ಅಂದು ರಾತ್ರಿ ಟಾರ್ಚ್‌ಲೈಟ್ ಪೆರೇಡ್ ನಡೆಯಲಿದೆ.

## ದೆಹಲಿಯಲ್ಲಿ ಭುಗಿಲೆದ್ದ ಆಕ್ರೋಶ

ಮುಂಜಾಗ್ರತಾ ಕ್ರಮವಾಗಿ ದೆಹಲಿ, ಸಿಆರ್‌ಪಿಎಫ್, ಬಿಎಸ್‌ಎಫ್ ಮತ್ತು ಆರ್ ಎಎಫ್ ಸೇರಿದಂತೆ 20,000ಕ್ಕೂ ಹೆಚ್ಚು ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾ ಗಿದೆ. ನಗರದ ಹಲವೆಡೆ ಕಟ್ಟೆಚ್ಚರ ವಹಿಸಲಾಗಿದೆ. ದೇಶದಲ್ಲಿ ಇತ್ತೀಚೆಗೆ ನಡೆದ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಭಾರೀ ಅಕ್ರಮಗಳು ನಡೆದಿವೆ ಎಂದು ಆರೋಪಿಸಿ, ಮುಖ್ಯ ಚುನಾವಣಾ ಆಯುಕ್ತರು ಕೂಡಲೇ ರಾಜೀ ನಾಮೆ ನೀಡಬೇಕೆಂದು ಒತ್ತಾಯಿಸಿ ಈ ಬೃಹತ್ ಜಂತರ್ ಮಂತರ್ 2.0 ಚಳವಳಿಯನ್ನು ಆಯೋಜಿಸಲಾಗಿದೆ. ಕಾಂಗ್ರೆಸ್, ಎಎಪಿ ಹಾಗೂ ತೃಣಮೂಲ ಕಾಂಗ್ರೆಸ್ ಸೇರಿದಂತೆ ಹಲವು ಪಕ್ಷಗಳ ನಾಯಕರು ಸೇರಿದಂತೆ ಅನೇ ಕರು ಈ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದಾರೆ.

## ಇಂದು ದಸರಾಗೆ ವಿಧ್ಯುಕ್ತ ಚಾಲನೆ

ದೇಶ, ವಿದೇಶಗಳ ಪ್ರವಾಸಿಗರು ಸೇರಿ ಕೋಟ್ಯಂತರ ಜನ ವೈಭವದ ದಸರಾ ಸಂಭ್ರಮಕ್ಕೆ ಸಾಕ್ಷಿಯಾಗಲಿದ್ದಾರೆ.

## 283 ಔಷಧಗಳ ದರ ಇಳಿಕೆ: ಸಚಿವ

ಅಂತಾ ನಮೂದಿಸಬೇಕು ಎಂದು ಸರ್ಕಾರ ತಿಳಿಸಿದೆ. 5 ಸಾವಿರದ ಔಷಧಿಗೆ ಅರವತ್ತೈದು ಸಾವಿರ ಆಗುತ್ತಿತ್ತು. ಈಗ ಜನರ ಕಿಸೆಗೆ ಬೀಳುತ್ತಿದ್ದ ಹೊರೆ ಕಡಿಮೆ ಆಗುತ್ತಿದೆ ಎಂದು ಹೇಳಿದರು.

ರಾಷ್ಟ್ರಮಟ್ಟದಲ್ಲಿ ಇದು ಸರಿಯಾದ ರೀತಿಯಲ್ಲಿ ಅನುಷ್ಠಾನ ಆದರೆ ಜನ ಸಾಮಾನ್ಯರ ಜೇಬಿನಿಂದ ಖರ್ಚಾಗುವ 2 ಸಾವಿರ ಕೋಟಿ ಹಣ ಉಳಿತಾಯವಾಗಲಿದೆ. ಕ್ಯಾನ್ಸರ್ ಜೊತೆಗೆ ಹೈರಿಸ್ಕ್ ಕಾಯಿಲೆಗಳ ಔಷಧಿ ಮೇಲೆ ದರ ನಿಗದಿಗೆ ಅವಕಾಶ ನೀಡಬೇಕು. ಮೆಡಿಕಲ್ ಸಾಮಗ್ರಿಗಳಿಗೂ ದುಪ್ಪಟ್ಟು ಹಣ ತೆಗೆದುಕೊಳ್ಳುತ್ತಾರೆ. ಇದಕ್ಕೂ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿದರು.

## ಬಿಜೆಪಿ ಸರ್ಕಾರ ಬೀಳುತ್ತೆ: ರಾಗಾ

ನಡೆಗೆ ಪ್ರತಿಕ್ರಿಯಿಸಿರುವ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್, ರಾಹುಲ್ ಗಾಂಧಿ ಮತ್ತು ಅರವಿಂದ್ ಕೇಜ್ರಿವಾಲ್ ವಿದೇಶಿ ಶಕ್ತಿಗಳ ಸೂಚನೆಯಂತೆ ದೇಶದಲ್ಲಿ ಅಶಾಂತಿ ಸೃಷ್ಟಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

# ಪತ್ರಕರ್ತರ ಸೇವೆ ಅಮೂಲ್ಯವಾದುದು: ಶಾಸಕ ದರ್ಶನ್

**ನಂಜನಗೂಡು:** ಸಮಾಜದಲ್ಲಿನ ಅಂಕುಡೊಂಕುಗಳನ್ನು ತಿದ್ದುವ ಜತೆಗೆ ಜನರ ಸಮಸ್ಯೆಗಳಿಗೆ ಧ್ವನಿಯಾಗಿ ಕಾರ್ಯನಿರ್ವಹಿಸುವ ಮೂಲಕ ಸಮಾಜದ ಪ್ರಗತಿಗೆ ನೆರವಾಗುತ್ತಿರುವ ಪತ್ರಕರ್ತರ ಸೇವೆ ಅಮೂಲ್ಯ ವಾದುದು ಎಂದು ಶಾಸಕ ದರ್ಶನ್ ಧ್ರುವನಾರಾಯಣ ಹೇಳಿದರು.

ನಗರದ ಶ್ರಾವಣ ಕಲ್ಯಾಣ ಮಂಟಪದಲ್ಲಿ ಶುಕ್ರವಾರ ತಾಲೂಕು ಪತ್ರಕರ್ತರ ಸಂಘದ ವತಿಯಿಂದ ಆಯೋಜಿಸಿದ್ದ ಪತ್ರಿಕಾ ದಿನಾಚರಣೆ ಹಾಗೂ ಜೆಎಸ್‌ಎಸ್ ಮಾಧ್ಯಮ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿಯುವಲ್ಲಿ ಪತ್ರಿಕಾ ರಂಗದ ಪಾತ್ರ ಮಹತ್ವದ್ದಾಗಿದೆ. ಸತ್ಯ, ನಿಷ್ಠೆ ಮತ್ತು ಸಾಮಾಜಿಕ ಹೊಣೆಗಾರಿಕೆಯನ್ನು ಆಧಾರವಾಗಿಟ್ಟುಕೊಂಡು ಪತ್ರಕರ್ತರು ಉತ್ತಮ ಸಮಾಜ ನಿರ್ಮಾಣಕ್ಕೆ ಶ್ರಮಿಸುತ್ತಿದ್ದಾರೆ. ಬದಲಾಗುತ್ತಿರುವ ಸನ್ನಿವೇಶದಲ್ಲಿ ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ವರದಿಗಳು ಮಾಧ್ಯಮ ಕ್ಷೇತ್ರದಲ್ಲಿ ಹೊಸ ಬದಲಾವಣೆಗಳನ್ನು ತರುತ್ತಿವೆ. ಆದರೂ, ತಳಮಟ್ಟದಲ್ಲಿ ನೇರ ವರದಿಗಾರಿಕೆಯಲ್ಲಿ ತೊಡಗಿರುವ ಪತ್ರಕರ್ತರ ವರದಿಗಳು ನೈಜ ಸಂಗತಿಗಳನ್ನು ಜನರಿಗೆ ತಲುಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿವೆ ಎಂದರು.



ನಂಜನಗೂಡು ತಾಲೂಕು ಪತ್ರಕರ್ತರ ಭವನದ ಮುಂದುವರಿದ ಕಾಮಗಾರಿಗಾಗಿ ಸ್ಥಳೀಯ ಶಾಸಕರ ಅನುದಾನದಿಂದ ?15 ಲಕ್ಷ ನೀಡಲಾಗಿದ್ದು, ಶೀಘ್ರದಲ್ಲೇ ಕಾಮಗಾರಿಗೆ ಚಾಲನೆ ನೀಡಲಾಗುವುದು. ಪತ್ರಕರ್ತರಿಗೆ ನಿವೇಶನ ಒದಗಿಸುವ ಕುರಿತು ತಾಲೂಕು ಪತ್ರಕರ್ತರ ಸಂಘದೊಂದಿಗೆ ಸಮಾಲೋಚನೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು. ನಗರಸಭೆ ಅಧಿಕಾರಿಗಳೊಂದಿಗೆ ಚರ್ಚಿಸಿ ಪತ್ರಕರ್ತರಿಗೆ ಆರೋಗ್ಯ ವಿಮೆ ಸೌಲಭ್ಯ ಕಲ್ಪಿಸಲು ಮುಂದಿನ ದಿನಗಳಲ್ಲಿ ಕ್ರಮ ವಹಿಸಲಾಗುವುದು ಎಂದು ಭರವಸೆ ನೀಡಿದರು.

ವಿಜಯ ಕರ್ನಾಟಕ ದಿನಪತ್ರಿಕೆಯ ಸ್ಥಾನಿಕ ಸಂಪಾದಕ ಐತಿಚಂಡ ರಮೇಶ್ ಉತ್ತಪ್ಪ ಮಾತನಾಡಿ, ಪ್ರಜಾಪ್ರಭುತ್ವದ ನಾಲ್ಕನೇ ಆಧಾರಸ್ತಂಭವಾಗಿರುವ ಮಾಧ್ಯಮ ಕ್ಷೇತ್ರ ಮುಕ್ತವಾಗಿ ಮತ್ತು ನ್ಯಾಯಸಮ್ಮತವಾಗಿ ಕಾರ್ಯನಿರ್ವಹಿಸಲು ಸಮಾಜ ಸಹಕರಿಸಬೇಕು. ಪತ್ರಿಕೆಗಳು ಅಳಿವಿನಂಚಿಗೆ ತಲುಪಿದರೆ ಸಮಾಜದ ಅಸ್ತಿತ್ವಕ್ಕೂ ಧಕ್ಕೆಯಾಗಲಿದೆ. ಸತ್ವಪೂರ್ಣ ಸಮಾಜ ನಿರ್ಮಾಣಕ್ಕೆ ಮಾಧ್ಯಮ ಕ್ಷೇತ್ರವನ್ನು ಬಲಪಡಿಸುವುದು ಅನಿವಾರ್ಯ ಎಂದರು. ಜೆಎಸ್‌ಎಸ್ ಮಹಾವಿದ್ಯಾಪೀಠದ ವೈದ್ಯಕೀಯ ವಿಭಾಗದ ನಿರ್ದೇಶಕ ಆರ್. ಮಹೇಶ್ ಮಾತನಾಡಿ, ಸಮಾಜದ ಉನ್ನತಿಗಾಗಿ ಶ್ರಮಿಸುವ ಅರ್ಹ ಪತ್ರಕರ್ತರನ್ನು ಗುರುತಿಸಿ ಸುತ್ತೂರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದ ವತಿಯಿಂದ ಪ್ರತಿವರ್ಷ ಜೆಎಸ್‌ಎಸ್ ಮಾಧ್ಯಮ ಪ್ರಶಸ್ತಿ ನೀಡಲಾಗುತ್ತಿದೆ. ಈ ಬಾರಿ ನಂಜನಗೂಡು ತಾಲೂಕಿನ ತಾಂಡವಪುರದ ಹಿರಿಯ ಪತ್ರಕರ್ತ ಟಿ.ಕೆ. ಬಸವರಾಜು ಅವರಿಗೆ ?10 ಸಾವಿರ ನಗದು ಬಹುಮಾನ ಹಾಗೂ ಪ್ರಶಸ್ತಿ ಫಲಕ ನೀಡಿ ಗೌರವಿಸಲಾಗಿದೆ ಎಂದರು. ಸಮಾರಂಭದಲ್ಲಿ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ದೀಪಕ್, ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ, ತಾಲೂಕು ಅಧ್ಯಕ್ಷ ಎಚ್.ಡಿ. ರಂಗಸ್ವಾಮಿ ಮಾತನಾಡಿದರು. ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಪತ್ರಕರ್ತರ ಸಂಘದ ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಹಲ್ಲಹಳ್ಳಿ ಮೋಹನ್, ಪ್ರಶಸ್ತಿ ಪುರಸ್ಕೃತ ಟಿ.ಕೆ. ಬಸವರಾಜು, ತಾಲೂಕು ಸಂಘದ ಕಾರ್ಯದರ್ಶಿ ಎನ್.ಪಿ. ದೀಪಕ್, ಉಪಾಧ್ಯಕ್ಷ ವೇಣುಗೋಪಾಲ್, ಖಜಾಂಚಿ ಭಾಗ್ಯರಾಜ್ ಸೇರಿದಂತೆ ಸಂಘದ ಪದಾಧಿಕಾರಿಗಳು, ಸದಸ್ಯರು ಹಾಗೂ ಗಣ್ಯರು ಉಪಸ್ಥಿತರಿದ್ದರು.

# ಹಾಸನಾಂಬದೇವಿ ದರ್ಶನ ಸುಗಮ

### ಸೂಕ್ತ ವ್ಯವಸ್ಥೆಗೆ ಜಿಲ್ಲಾಧಿಕಾರಿ ಲತಾ ಕುಮಾರಿ ಸೂಚನೆ | ದೇವಾಲಯಕ್ಕೆ ಭೇಟಿ, ಪರಿಶೀಲನೆ

ಹಾಸನ: ಶ್ರೀ ಹಾಸನಾಂಬ ದೇವಿಯ ಗರ್ಭಗುಡಿ ಮುಂಭಾಗದ ಪ್ರಾಂಗಣದಿಂದಲೇ ಭಕ್ತಾದಿಗಳು ಸುಗಮವಾಗಿ ದೇವಿ ದರ್ಶನ ಪಡೆಯಲು ಸೂಕ್ತ ವ್ಯವಸ್ಥೆ ಕಲ್ಪಿಸುವಂತೆ ಜಿಲ್ಲಾಧಿಕಾರಿ ಲತಾ ಕುಮಾರಿ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಜಿಲ್ಲಾಧಿಕಾರಿ ಅವರು ಇಂದು ಶ್ರೀ ಹಾಸನಾಂಬ ದೇವಾಲಯಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಜಾತ್ರಾ ಮಹೋತ್ಸವದ ಹಿನ್ನೆಲೆಯಲ್ಲಿ ಕೈಗೊಳ್ಳಬೇಕಾದ ಸಿದ್ಧತೆಗಳ ಕುರಿತು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.





#### ಪ್ರಾಂಗಣದಲ್ಲಿ ಎ.ಸಿ.ವ್ಯವಸ್ಥೆ, ಸ್ವಚ್ಛತೆ

ಗರ್ಭಗುಡಿ ಮುಂಭಾಗದ ಪ್ರಾಂಗಣದಲ್ಲಿ ಎ.ಸಿ. ನಿರಂತರವಾಗಿ ಕಾರ್ಯನಿರ್ವಹಿಸುತ್ತಿರಬೇಕು. ಮೇಲ್ಛಾವಣಿಯನ್ನು ಸರಿಪಡಿಸುವುದರ ಜೊತೆಗೆ, ಪ್ರಾಂಗಣದಲ್ಲಿ ಯಾವುದೇ ವಸ್ತುಗಳನ್ನು ಇರಿಸದೆ ಸ್ವಚ್ಛವಾಗಿಡಲು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ಭಕ್ತಾದಿಗಳು ದೇವಿ ದರ್ಶನ ಪಡೆದು ಹೊರ ಹೋಗುವ ದ್ವಾರದ ಬಳಿ ಲ್ಯಾಂಪ್ ವಿಸ್ತರಿಸುವಂತೆ ಹಾಗೂ ಜಾರಿಬೀಳದಂತೆ ಸೂಕ್ತ ನಿರ್ಮಾಣ ಕಾರ್ಯ ಕೈಗೊಳ್ಳುವಂತೆ ಅಧಿಕಾರಿಗಳಿಗೆ ತಿಳಿಸಿದರು.

#### ಪ್ರಸಾದ ವಿತರಣೆ, ಮಡಲಕ್ಕಿ ಅರ್ಪಣೆಗೆ ಪ್ರತ್ಯೇಕ ಕೌಂಟರ್

ದೊನ್ನೆ ಪ್ರಸಾದ ವಿತರಣೆಯ ಸಂದರ್ಭದಲ್ಲಿ ಭಕ್ತಾದಿಗಳಿಗೆ ಅನುಕೂಲವಾಗುವಂತೆ ಪ್ರಸಾದ ಸ್ವೀಕರಿಸಲು ಚಿಕ್ಕ ಮರದ ಸ್ಪೂನ್ಗಳನ್ನು ನೀಡಬೇಕು. ಕಸದ ಬುಟ್ಟಿಗಳನ್ನು ಸೂಕ್ತ ಸ್ಥಳಗಳಲ್ಲಿ ಇರಿಸಬೇಕು. ಭಕ್ತಾದಿಗಳು ದೇವಿಗೆ ಅರ್ಪಿಸಲು ತರುವ ಮಡಲಕ್ಕಿಯನ್ನು ದೇವಾಲಯದ ಹೊರಭಾಗದಲ್ಲಿಯೇ ನೀಡಲು ಅಗತ್ಯ ಕೌಂಟರ್ ತೆರೆಯಬೇಕು ಎಂದು ಜಿಲ್ಲಾಧಿಕಾರಿ ಸೂಚಿಸಿದರು.

ಭಕ್ತರಿಗೆ ಅಗತ್ಯ ಮಾಹಿತಿಯನ್ನು ಕಾಲಕಾಲಕ್ಕೆ ಧ್ವನಿವರ್ಧಕದ ಮೂಲಕ ಪ್ರಕಟಿಸುವ ವ್ಯವಸ್ಥೆ ಮಾಡಬೇಕು. ರಸ್ತೆ ಗುಂಡಿಗಳನ್ನು ಮುಚ್ಚಲು ಕ್ರಮ ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದರು.

#### ಶೌಚಾಲಯಗಳ ಸ್ವಚ್ಛತೆ ಪರಿಶೀಲನೆ

ಶೌಚಾಲಯಗಳ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಸ್ವಚ್ಛತಾ ಕಾರ್ಯದಲ್ಲಿ ತೊಡಗಿರುವ ಸಿಬ್ಬಂದಿಯ ಹಾಜರಾತಿಯನ್ನು ಪ್ರತಿದಿನ ಕಡ್ಡಾಯವಾಗಿ ದಾಖಲಿಸಬೇಕು. ಯಾವ ಪಾಳಿಯಲ್ಲಿ ಯಾರು ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂಬ ಮಾಹಿತಿ ಲಭ್ಯವಿರುವಂತೆ ಪಟ್ಟಿ ಸಿದ್ಧಪಡಿಸಬೇಕು. ಸ್ವಚ್ಛತಾ ಸಿಬ್ಬಂದಿಗೆ ತರಬೇತಿ ಆಯೋಜಿಸವಂತೆಯೂ ತಿಳಿಸಿದರು. ದೇವಿ ದರ್ಶನಕ್ಕೆ ಆಗಮಿಸುವ ಭಕ್ತಾದಿಗಳಿಗೆ ಅನುಕೂಲವಾಗುವಂತೆ ಬಸ್ ನಿಲ್ದಾಣ ಹಾಗೂ ರೈಲ್ವೆ ನಿಲ್ದಾಣಗಳಲ್ಲಿರುವ ಶೌಚಾಲಯಗಳ ಜೊತೆಗೆ ಹೆಚ್ಚುವರಿ ತಾತ್ಕಾಲಿಕ ಶೌಚಾಲಯಗಳ ವ್ಯವಸ್ಥೆ ಕಲ್ಪಿಸಲು ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

#### 300 ರೂ. ಸರತಿ ಸಾಲು ವಿಸ್ತರಣೆ

300 ರೂ. ದರದ ಸರತಿ ಸಾಲನ್ನು ವಿಸ್ತರಿಸಲು ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ಸೂಚಿಸಿದರು. ಭಕ್ತಾದಿಗಳ ಸುರಕ್ಷತೆಯ ದೃಷ್ಟಿಯಿಂದ ಜಾತ್ರಾ ಸಂದರ್ಭದಲ್ಲಿ ವೆಲ್ಡಿಂಗ್ ಶಾಪ್ ಸೇರಿದಂತೆ ಕಿಡಿ ಉಂಟುಮಾಡುವ ಯಾವುದೇ ಅಂಗಡಿಗಳನ್ನು ತೆರೆಯದಂತೆ ಕ್ರಮ ವಹಿಸಬೇಕು ಎಂದರು.

ದೇವಾಲಯದ ಸುತ್ತಮುತ್ತ ಹೆಚ್ಚಿನ ಸಂಖ್ಯೆಯಲ್ಲಿ ಸಿಸಿಟಿವಿ ಪಾಯಿಂಟ್ಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಬೇಕು. ಶ್ರೀ ಹಾಸನಾಂಬ ದೇವಿ ಹಾಗೂ ಶ್ರೀ ಸಿದ್ದೇಶ್ವರ ಸ್ವಾಮಿ ದೇವಾಲಯಗಳ ಬೋರ್ಡ್ಗಳನ್ನು ಬದಲಾಯಿಸಿ ಹೊಸ ಬೋರ್ಡ್ಗಳನ್ನು ಅಳವಡಿಸಲು ಕ್ರಮ ವಹಿಸಬೇಕು ಎಂದು ಸೂಚಿಸಿದರು.

#### ಜಾತ್ರೆಗೆ ವಾರ ಮುನ್ನವೇ ದೀಪಾಲಂಕಾರ ಪೂರ್ಣಗೊಳಿಸಿ

ಜಾತ್ರಾ ಮಹೋತ್ಸವದ ಹಿನ್ನೆಲೆಯಲ್ಲಿ ನಗರದಲ್ಲಿ ವಿದ್ಯುತ್ ದೀಪಾಲಂಕಾರವನ್ನು ಆಕರ್ಷಕವಾಗಿ ಮಾಡಿಸಬೇಕು. ಜಾತ್ರಾ ಮಹೋತ್ಸವ ಆರಂಭವಾಗುವ ಒಂದು ವಾರ ಮೊದಲೇ ದೀಪಾಲಂಕಾರದ ಕೆಲಸ ಪೂರ್ಣಗೊಳಿಸಿರಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು. ಹೆಚ್ಚಿನ ಭಕ್ತಾದಿಗಳು ದೇವಿ ದರ್ಶನ ಪಡೆ ಯಲು ಅನುಕೂಲವಾಗುವಂತೆ ಪೂಜಾ ಕಾರ್ಯ ಗಳಿಗೆ ಅಗತ್ಯವಿರುವ ಎಲ್ಲ ಸಿದ್ಧತೆಗಳನ್ನು ಮುಂಚಿ ತವಾಗಿ ಮಾಡಿಕೊಳ್ಳಬೇಕು. ಕಡಿಮೆ ಅವಧಿಯಲ್ಲಿ ನಿಯಮಬದ್ಧವಾಗಿ ಅಮ್ಮನವರ ಪೂಜೆ ನೆರವೇರಿ ಸುವ ಮೂಲಕ ಸಹಕರಿಸುವಂತೆ ಪುರೋಹಿತರಲ್ಲಿ ಮನವಿ ಮಾಡಿದರು.

#### ಹಿರಿಯ ನಾಗರಿಕರು, ವಿಕಲಚೇತನರಿಗೆ ಪ್ರತ್ಯೇಕ ಕೊಠಡಿ

ವಿಕಲಚೇತನರು, 80 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು ಹಾಗೂ ಒಂದು ವರ್ಷದೊಳಗಿನ ಮಕ್ಕಳೊಂದಿಗೆ ಬರುವ ತಾಯಂದಿರು ಮತ್ತು ಅವರೊಂದಿಗೆ ದೇವಿ ದರ್ಶನಕ್ಕೆ ಆಗಮಿಸುವವರು ಕಾಯ್ದು ಕುಳಿತುಕೊಳ್ಳಲು ಪ್ರತ್ಯೇಕ ಕೊಠಡಿ ವ್ಯವಸ್ಥೆ ಕಲ್ಪಿಸಲು ಸಿದ್ಧತೆ ಮಾಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ನಿರ್ದೇಶನ ನೀಡಿದರು. ದೇವಿ ದರ್ಶನಕ್ಕೆ ಆಗಮಿಸುವ ಭಕ್ತಾದಿಗಳಿಗೆ ಆರೋಗ್ಯ ಸಮಸ್ಯೆಗಳು ಕಂಡುಬಂದಲ್ಲಿ ತಕ್ಷಣ ಚಿಕಿತ್ಸೆ ಒದಗಿಸಲು ಅಗತ್ಯ ಔಷಧಿಗಳು ಹಾಗೂ ಉಪಕರಣಗಳನ್ನು ಸಿದ್ಧವಾಗಿಟ್ಟುಕೊಳ್ಳಬೇಕು. ಪ್ರಾಥಮಿಕ ಚಿಕಿತ್ಸೆ ಸೇರಿದಂತೆ ಉತ್ತಮ ಆರೋಗ್ಯ ಸೇವೆ ಒದಗಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

#### ದೇವಿಗೆರೆ ಕಲ್ಯಾಣಿಯ ಸೌಂದರ್ಯೀಕರಣಕ್ಕೆ ಕ್ರಿಯಾ ಯೋಜನೆ

ನಂತರ ಜಿಲ್ಲಾಧಿಕಾರಿ ಅವರು ದೇವಿಗೆರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಕಲ್ಯಾಣಿಯ ಸುತ್ತ ಮುತ್ತ ಸ್ವಚ್ಛತೆ ಕಾಪಾಡಲು ಕ್ರಮ ಕೈಗೊಳ್ಳಬೇಕು. ಕಲ್ಯಾಣಿಯ ಸೌಂದರ್ಯೀಕರಣಕ್ಕಾಗಿ ಕ್ರಿಯಾ ಯೋಜನೆ ಸಿದ್ಧಪಡಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಕೃಷ್ಣಮೂರ್ತಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿಧಿ, ಮಹಾನಗರ ಪಾಲಿಕೆಯ ಆಯುಕ್ತರಾದ ಕೃಷ್ಣಮೂರ್ತಿ, ಉಪ ವಿಭಾಗಾಧಿಕಾರಿ ಜಗದೀಶ್ ಗಂಗಣ್ಣನವರ್, ತಹಸೀಲ್ದಾರ್ ಗೀತಾ ಹಾಗೂ ವಿವಿಧ ಅಧಿಕಾರಿಗಳು ಹಾಜರಿದ್ದರು.

# ನೆಲ, ಜಲ, ಭಾಷೆ ಸಂರಕ್ಷಣೆಗೆ ಬದ್ಧ



ಗುಂಡ್ಲುಪೇಟೆ: ಕನ್ನಡ ಭಾಷೆ, ನೆಲ, ಜಲ ಹಾಗೂ ನಾಡಿನ ಸಂಸ್ಕೃತಿಯ ಉಳಿವಿಗಾಗಿ ಸಂಘಟನೆಗಳ ಪಾತ್ರ ಮಹತ್ವದ್ದಾಗಿದೆ ಎಂದು ಜಯ ಕರ್ನಾಟಕ ರಕ್ಷಣಾ ಸೇನೆಯ ಪದಾಧಿಕಾರಿಗಳು ತಿಳಿಸಿದರು.

ಪಟ್ಟಣದ ಹಳೆಯ ಪ್ರವಾಸಿ ಮಂದಿರದಲ್ಲಿ ರಾಜ್ಯಾಧ್ಯಕ್ಷ ಕೆ.ಸಿ. ರಾಜಪ್ಪ ಅವರ ಆದೇಶದ ಮೇರೆಗೆ ಜಿಲ್ಲಾ ಹಾಗೂ ತಾಲೂಕು ಮಟ್ಟದ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ನಡೆಯಿತು. ಜಿಲ್ಲಾ ಗೌರವಾಧ್ಯಕ್ಷೆ ಎಸ್. ಪುಟ್ಟಮ್ಮ, ಜಿಲ್ಲಾಧ್ಯಕ್ಷ ಎಸ್. ಈಶ್ವರ್ ಹಾಗೂ ತಾಲೂಕು ಅಧ್ಯಕ್ಷ ಸೈಯದ್ ಅನ್ಸರ್ ಅವರ ನೇತೃತ್ವದಲ್ಲಿ ಆಯ್ಕೆ ನಡೆಯಿತು. ಜಿಲ್ಲಾ ಉಪಾಧ್ಯಕ್ಷರಾಗಿ ಕಿಲಗೆರೆ ವಾಸು, ಜಿಲ್ಲಾ ಮಹಿಳಾ ಘಟಕದ ಉಪಾಧ್ಯಕ್ಷರಾಗಿ ಸುಜಯ, ಗುಂಡ್ಲುಪೇಟೆ ತಾಲೂಕು ಮಹಿಳಾ ಅಧ್ಯಕ್ಷೆಯಾಗಿ ಪುಟ್ಟಗೋಪಮ್ಮ, ತಾಲೂಕು ಉಪಾಧ್ಯಕ್ಷರಾಗಿ ರೂಪ, ಸಂಘಟನಾ ಕಾರ್ಯದರ್ಶಿಯಾಗಿ ಚಿಕ್ಕಸಿದ್ದಮ್ಮ, ತಾಲೂಕು ಉಪಾಧ್ಯಕ್ಷರಾಗಿ ಬಲಚವಾಡಿ ಕುಮಾರ್, ಪ್ರಧಾನ ಕಾರ್ಯದರ್ಶಿಯಾಗಿ ಕ್ಯಾಸಿನೋ ಬೇಕರಿಯ ಜಾಫರ್ ಹಾಗೂ ಟೌನ್ ಕಾರ್ಯಾಧ್ಯಕ್ಷರಾಗಿ ಗೋವಿಂದರಾಜು ಆಯ್ಕೆಯಾದರು.

ಈ ಸಂದರ್ಭದಲ್ಲಿ ರೇಖಾ ಭಾಸ್ಕರ್, ಸವಿತಾ, ಗುರುಪ್ರಸಾದ್, ಅಜಿತ್ ಕುಮಾರ್, ಪ್ರಸಾದ್ ಚಿನ್ನಸ್ವಾಮಿ, ಕೆ.ಎಂ. ಮನಸ್, ಲಕ್ಕೂರು ನಾಗರಾಜು ಸೇರಿದಂತೆ ಹಲವರು ಉಪಸ್ಥಿತರಿದ್ದರು. ಮಾಧ್ಯಮ ಸಲಹೆಗಾರ ಸದಾನಂದ ಕನ್ನೆಗಾಲ ಭಾಗವಹಿಸಿದ್ದರು.

# ಗಿರಿಜನರೊಂದಿಗೆ ಸಚಿವರ ಸಂವಾದ



ಚಾಮರಾಜನಗರ: ಜಿಲ್ಲೆಯ ಬಿಳಿಗಿರಿರಂಗನ ಬೆಟ್ಟ ಯರಕನಗದ್ದೆಪೋಡಿಗೆ ಭೇಟಿ ನೀಡಿದ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಸಚಿವ ಟಿ. ರಘುಮೂರ್ತಿ ಅವರಿಗೆ ಗಿರಿಜನರು ಗೊರುಕನ ನೃತ್ಯ ಮೂಲಕ ಸ್ವಾಗತಿಸಿ ಬರಮಾಡಿಕೊಂಡರು.

ಸಚಿವರು ಪೋಡಿನ ನಿವಾಸಿಗಳೊಂದಿಗೆ ಸಂವಾದ ನಡೆಸಿ, ಸಮಸ್ಯೆಗಳನ್ನು ಆಲಿಸಿದರು. ಸಮಸ್ಯೆಗಳನ್ನು ಪರಿಹರಿಸುವುದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಜೆ.ಯೋಗೀಶ್, ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಹೆಚ್ ವಿ.ಚಂದ್ರು,ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಹೆಚ್.ಸಿ.ಬಸವರಾಜು, ಜಿ.ಪಂ. ಮಾಜಿ ಅಧ್ಯಕ್ಷೆ ಕೇತಮ್ಮ,ಮಾಜಿ ಸದಸ್ಯರಾದ ಎಸ್.ಸೋಮನಾಯಕ, ರಮೇಶ್, ಪರಿಶಿಷ್ಟ ಪಂಗಡ ಕಲ್ಯಾಣ ಇಲಾಖೆ ಉಪನಿರ್ದೇಶಕಿ ಬಿಂದ್ಯಾ, ತಹಸೀಲ್ದಾರ್ ನಯನ, ಅಶೋಕ್ ಇತರರು ಹಾಜರಿದ್ದರು.

# ಬೆಟ್ಟದ ಮಹಿಷನಿಗೆ ಪುಷ್ಪಾರ್ಚನೆ, ಮಹಿಷಾ ದಸರಾ ಆಚರಣೆ

ಮೈಸೂರು: ಹಲವು ವರ್ಷಗಳಿಂದ ಚಾಮುಂಡಿ ಬೆಟ್ಟದಲ್ಲಿರುವ ಮಹಿಷನ ಪ್ರತಿಮೆಗೆ ಪುಷ್ಪಾರ್ಚನೆ ಸಲ್ಲಿಸಲು ಪೊಲೀಸರು ತಡೆಯೊಡ್ಡುತ್ತಿದ್ದರೂ, ಈ ಬಾರಿ ಪುಷ್ಪಾರ್ಚನೆಗೆ ಅವಕಾಶ ಮಾಡಿಕೊಟ್ಟ ಹಿನ್ನೆಲೆಯಲ್ಲಿ ಶನಿವಾರ ಮಹಿಷಾ ದಸರಾ ಆಚರಣೆ ನಡೆಯಿತು.

**▸▸ ಮಹಿಷನ ಇತಿಹಾಸ ಹೇಳಲು ಯಾರಿಗೂ ಹೆದರಬೇಕಿಲ್ಲ: ವಿಠಲ್ ವಗ್ಗನ್**

ಮಹಿಷ ದಸರಾ ಆಚರಣಾ ಸಮಿತಿಯ ನೇತೃತ್ವದಲ್ಲಿ ಉರಿಲಿಂಗಿ ಪೆದ್ದಿ ಮಠದ ಜ್ಞಾನಪ್ರಕಾಶ್ ಸ್ವಾಮೀಜಿ, ಮಾಜಿ ಮೇಯರ್ ಪುರುಷೋತ್ತಮ್ ಹಾಗೂ ಲೇಖಕ ಸಿದ್ಧಸ್ವಾಮಿ ಅವರು ಶನಿವಾರ ಬೆಳಿಗ್ಗೆ 8.30ರ ವೇಳೆಗೆ ಚಾಮುಂಡಿ ಬೆಟ್ಟದಲ್ಲಿರುವ ಮಹಿಷನ ಪ್ರತಿಮೆ ಬಳಿಗೆ ತೆರಳಿ ಮಾಲಾರ್ಪಣೆ ಹಾಗೂ ಪುಷ್ಪಾರ್ಚನೆ ನೆರವೇರಿಸಿದರು. ಬಳಿಕ ಬೌದ್ಧ ಆಚರಣೆಯಂತೆ ದೀಪ ಬೆಳಗಿಸಿ, ಪಂಚಶೀಲ ಬೋಧನೆ ಹಾಗೂ ಧಮ್ಮ ವಂದನೆ ಸಲ್ಲಿಸಿದರು.




**'ಮಹಿಷ ಚಾರಿತ್ರಿಕ, ಚಾಮುಂಡಿ ಕಾಲ್ಪನಿಕ' ಪುಸ್ತಕ ಬಿಡುಗಡೆ**

ಲೇಖಕ ಸಿದ್ಧಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಇದೇ ಸಂದರ್ಭದಲ್ಲಿ ಪ್ರಗತಿಪರ ಚಿಂತಕ ವಿಠಲ್ ವಗ್ಗನ್ ಅವರ 'ಮಹಿಷ ಚಾರಿತ್ರಿಕ, ಚಾಮುಂಡಿ ಕಾಲ್ಪನಿಕ' ಪುಸ್ತಕವನ್ನು ಬಿಡುಗಡೆ ಮಾಡಲಾಯಿತು.

ಇತಿಹಾಸ ತಜ್ಞ ಪ್ರೊ. ನಂಜರಾಜ ಅರಸು ಕಾರ್ಯಕ್ರಮದ ಕುರಿತು ಮಾತನಾಡಿದರು. ಕಾರ್ಯಕ್ರಮದಲ್ಲಿ ಮಾಜಿ ಮೇಯರ್ ಹಾಗೂ ಮಹಿಷ ದಸರಾ ಆಚರಣಾ ಸಮಿತಿ ಅಧ್ಯಕ್ಷ ಪುರುಷೋತ್ತಮ್ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಸಾಹಿತಿ ಪ್ರೊ. ಕೆ.ಎಸ್. ಭಗವಾನ್ ಹಾಗೂ ಇತಿಹಾಸ ತಜ್ಞ ಪ್ರೊ. ನಂಜರಾಜ ಅರಸು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಹಿರಿಯ ಹೋರಾಟಗಾರ ಹರಿಹರ ಆನಂದಸ್ವಾಮಿ, ಸಾಮಾಜಿಕ ಹೋರಾಟಗಾರ ಅಹಿಂದ ಜವರಪ್ಪ, ಅಶೋಕಪುರಂ ಮಹೇಶ್, ದಸಂಸ ಮುಖಂಡರಾದ ದೇವಗಳ್ಳಿ ಸೋಮಶೇಖರ್, ಆಲಗೂಡು ಶಿವಕುಮಾರ್, ಭುಗತಹಳ್ಳಿ ಮಣಿಯಯ್ಯ, ಮಲ್ಲಹಳ್ಳಿ ನಾರಾಯಣ್, ದಲಿತ ವೆಲ್ಫೇರ್ ಟ್ರಸ್ಟ್ ಅಧ್ಯಕ್ಷ ಚಿಕ್ಕಂದಾನಿ, ಯುವ ಮುಖಂಡ ಭರತ್ ರಾಮಸ್ವಾಮಿ, ಸಿದ್ಧರಾಜು, ಸೋಮಯ್ಯ ಮಲೆಯೂರು, ಬನ್ನಹಳ್ಳಿ ಸೋಮಣ್ಣ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಮಹಿಷ, ಬುದ್ಧ, ಅಂಬೇಡ್ಕರ್ ಪ್ರತಿಮೆಗಳಿಗೆ ಪುಷ್ಪಾರ್ಚನೆ

ನಂತರ ಮೈಸೂರು ನಗರದ ಪುರಭವನದ ಆವರಣದಲ್ಲಿ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಮಹಿಷ, ಬುದ್ಧ ಮತ್ತು ಅಂಬೇಡ್ಕರ್ ಅವರ ಕಂಚಿನ ಪ್ರತಿಮೆಗಳಿಗೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಪ್ರಗತಿಪರ ಚಿಂತಕ ವಿಠಲ್ ವಗ್ಗನ್ ಕಾರ್ಯಕ್ರಮ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ಮಹಿಷ ಎಂದರೆ ಬುದ್ಧ, ಮಹಿಷ ಜನಾಂಗವೇ ಬೌದ್ಧ ಜನಾಂಗ. ನಮ್ಮ ಮೂಲಪುರುಷನ ಇತಿಹಾಸವನ್ನು ಹೇಳಲು ನಾವು ಯಾರಿಗೂ ಹೆದರಬೇಕಿಲ್ಲ ಎಂದು ಹೇಳಿದರು. ಮಹಿಷ ಎಂದರೆ ಎಮ್ಮೆ ಹಾಲು ಕುಡಿಯುವವರು, ಕೋಣದೊಂದಿಗೆ ಬೇಸಾಯ ಮಾಡುವವರು ಎಂಬ ಅರ್ಥವಿದೆ. ಈ ನಾಡಿನ ಬಹುತೇಕ ಜನರು ಹಿಂದೆ ಈ ಕೆಲಸ ಮಾಡುತ್ತಿದ್ದರು. ಕ್ರಿಸ್ತಪೂರ್ವ 7 ಸಾವಿರ ವರ್ಷಗಳ ಹಿಂದೆ ಮಹಿಷ ಸಿಂಧೂ ನದಿ ಬಯಲಿನ ನಾಗರಿಕತೆಯಲ್ಲಿದ್ದವರು. ಈ ಸಂದರ್ಭದಲ್ಲಿ ಭಾರತಕ್ಕೆ ಬಂದ ಆರ್ಯರು ಮಹಿಷನೊಂದಿಗೆ ಸಂಘರ್ಷಕ್ಕಿಳಿದು ಆತನನ್ನು ಹತ್ಯೆ ಮಾಡುತ್ತಾರೆ. ಆ ನಡುವೆ ಭಾರತದಲ್ಲಿ ಆರ್ಯರ ಉಗಮವಾಗುತ್ತದೆ ಎಂದು ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

11 October 2026 Sunday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

info.varthaman@gmail.com

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಅಂತರಂಗ ಸಂತೋಷ ಹೊಂದುವ ಕೆಲಸಗಳು, ಮನಸ್ಸಿಗೆ ಸದಾ ಸಂತೃಪ್ತಿ, ಉಲ್ಲಾಸ ನೀಡುತ್ತವೆ!

ಸ್ನೇಹಾ ಆನಂದ್



ಬೆಟ್ಟದ ಮಹಿಷನಿಗೆ ಪುಷ್ಪಾರ್ಚನೆ, ಮಹಿಷಾ ದಸರಾ ಆಚರಣೆ

ಪುಟ ಸಂ. 2

ಪುಟ ಸಂ. 3

ಫಲಾನುಭವಿಗಳಿಗೆ ಸೌಲಭ್ಯ ತಲುಪಿಸಿ: ಸಚಿವ





ವನ್ಯಜೀವಿ ಸಫಾರಿಗಳಲ್ಲಿ ಮೊಬೈಲ್ ಬಳಕೆ ನಿರ್ಬಂಧ

ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 293 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

## ರಾಜಮನೆತನದ ಖಾಸಗಿ ದರ್ಬಾರ್

### ಇಂದು ಸಿಂಹಾಸನಕ್ಕೆ ಸಿಂಹ ಜೋಡಣೆ ಕಾರ್ಯ





**ಮೈಸೂರು:** ನವರಾತ್ರಿ ಹಿನ್ನೆಲೆ ಯಲ್ಲಿ ಮೈಸೂರು ಅರಮನೆಯ ಒಳಗಡೆ ರಾಜ ವಂಶಸ್ಥರು ಸಾಂಪ್ರ ದಾಯಿಕ ಧಾರ್ಮಿಕ ಕಾರ್ಯಗಳನ್ನು ನೆರವೇರಿಸುತ್ತಾರೆ. ಸಂಪ್ರ ದಾಯದಂತೆ ಇಂದಿಗೂ ರಾಜ ಮನೆತನ ಖಾಸಗಿಯಾಗಿ ದಸರಾ ಆಚರಣೆಯನ್ನು ನಡೆಸುತ್ತಾರೆ. ಇದನ್ನು ಖಾಸಗಿ ದರ್ಬಾರ್ ಎಂದೇ ಕರೆಯಲಾಗುತ್ತದೆ.

ಮೈಸೂರು ರಾಜಮನೆತನದ ಸಾಂಪ್ರ ದಾಯಿಕ ವಿಧಿವಿಧಾನಗಳು ಅಂಬಾವಿ ಲಾಸ ಅರಮನೆಯಲ್ಲಿ ಈಗಾಗಲೇ ಆರಂ ಭವಾಗಿವೆ. ಭಾನುವಾರ ಬೆಳಿಗ್ಗೆ 6ರಿಂದ 7:12ರೊಳಗೆ ಸಿಂಹಾಸನಕ್ಕೆ ಸಿಂಹ ಜೋಡಣೆ ಕಾರ್ಯ ನೆರವೇರಲಿದೆ. ಬಳಿಕ ಬೆಳಿಗ್ಗೆ 8:35 ರಿಂದ 9:05ರವರೆಗೆ ರಾಜವಂಶಸ್ಥರಾದ

### ಅರಮನೆ ಪ್ರವೇಶ ನಿರ್ಬಂಧ

**ರಾಜಮನೆತನದವರ ದಸರಾ ಆಚರಣೆ ಹಿನ್ನೆಲೆಯಲ್ಲಿ ಖಾಸಗಿ ದರ್ಬಾರ್ ಧಾರ್ಮಿಕ ಪೂಜಾ ಕೈಂಕರ್ಯ ನಡೆಯುವ ಅಕ್ಟೋ ಬರ್ 11ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 2ರ ವರೆಗೆ ಮತ್ತು ಅ.20ರಂದು ಕಲ್ಯಾಣ ಮಂಟಪದಲ್ಲಿ ಮಹಾನವಮಿ ಹಾಗೂ ಆಯುಧ ಪೂಜೆ ನಡೆ ಯುವುದರಿಂದ ಸಂಪೂರ್ಣ ದಿನ ಅರಮನೆ ಪ್ರವೇಶವನ್ನು ನಿರ್ಬಂಧಿಸಲಾಗಿದೆ. ಅ.21 ರಂದು ವಿಜಯದಶಮಿ ಹಬ್ಬದ ಪ್ರಯುಕ್ತ ಸಂಪೂರ್ಣ ದಿನ ಸಾರ್ವಜನಿಕರ ಸಾಮಾನ್ಯ ಪ್ರವೇಶವಿರುವುದಿಲ್ಲ. ಕೇವಲ ದಸರಾ ಪಾಸ್ ಹಾಗೂ ಜಂಬೂಸವಾರಿ ಟಿಕೆಟ್**

# ಇಂದು 'ದಸರಾ ಸಂಭ್ರಮ'ಕ್ಕೆ 'ಶ್ರೀ' ಕಾರ

## ತ್ರಿವಿಧ ದಾಸೋಹಿ ಗವಿಸಿದ್ದೇಶ್ವರ ಶ್ರೀಗಳಿಂದ ಉದ್ಘಾಟನೆ | ಮೈಸೂರು ಎಲ್ಲೆಲ್ಲೂ ಝಗಮಗ

**ಮೈಸೂರು:** ವಿಶ್ವವಿಖ್ಯಾತ ಮೈಸೂರು ದಸರಾ ಮಹೋ ತ್ಸವದ ಸಂಭ್ರಮ ಸಾಂಸ್ಕೃತಿಕ ನಗರದಲ್ಲಿ ಮನೆ ಮಾಡಿದೆ. ದಸರಾ ಮಹೋತ್ಸವದ ಉದ್ಘಾಟ ನೆಗೆ ಕ್ಷಣಗಣನೆ ಆರಂಭವಾಗಿದೆ. ಚಾಮುಂಡಿ ಬೆಟ್ಟ ಹಾಗೂ ಮೈಸೂರು ಅರಮನೆ ಎರಡೂ ಕಡೆ ಅಂತಿಮ ಹಂತದ ಸಿದ್ಧತೆ ಗಳು ನಡೆಯುತ್ತಿವೆ. ಅರಮನೆ ಮತ್ತು ಚಾಮುಂಡಿ ಬೆಟ್ಟ ದಾದ್ಯಂತ ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿದೆ.

**ನಾಡಹಬ್ಬಕ್ಕೆ ಅ.11ರಂದು ಭಾನುವಾರ ವಿದ್ಯುಕ್ತ ಚಾಲನೆ ಸಿಗಲಿದೆ.**

ಭಾನುವಾರ ಬೆಳಿಗ್ಗೆ 11:50ರಿಂದ 12:13ರ ಧನುರ್ ಲಗ್ನದಲ್ಲಿ ನಾಡಹಬ್ಬ ದಸರಾ ಮಹೋತ್ಸವ ಉದ್ಘಾ ಟನೆ ನಡೆಯಲಿದೆ. ಕೊಪ್ಪಳದ ಗವಿಮಠದ ಶ್ರೀ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ ಅವರು ದಸರಾ ಮಹೋತ್ಸವವನ್ನು ವಿದ್ಯುಕ್ತ ಉದ್ಘಾಟನೆ ಮಾಡಿ ಆಶೀರ್ವಚನ ನೀಡಲಿದ್ದಾರೆ. ದಸರಾ ಉದ್ಘಾಟನೆಗೆ ಶನಿವಾರ ತ್ರಿವಿಧ ದಾಸೋಹಿ ಅಭಿ ನವ ಗವಿಸಿದ್ದೇಶ್ವರ ಶ್ರೀಗಳು ಮೈಸೂರಿಗೆ ಆಗ







ಮಿಸಿದ್ದಾರೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಉಪಮುಖ್ಯ ಮಂತ್ರಿ ಡಾ.ಜಿ.ಪರಮೇಶ್ವರ್ ಸೇರಿ ಹಲವು ಸಚಿವರು, ಶಾಸಕರು ಭಾಗವಹಿಸುವರು. ವಿಶೇಷವೆಂದರೆ ಈ ಬಾರಿ 100ಕ್ಕೂ ಹೆಚ್ಚು ಧರ್ಮಗುರುಗಳು ದಸರಾ ಕಾರ್ಯ ಕ್ರಮಗಳಲ್ಲಿ ಭಾಗಿಯಾಗುತ್ತಿದ್ದಾರೆ. ವಿವಿಐಪಿ, ವಿಐಪಿ ಹಾಗೂ ಸಾರ್ವಜನಿಕರಿಗೆ ಪ್ರತ್ಯೇಕ ಆಸನ ವ್ಯವಸ್ಥೆ ಕಲ್ಪಿಸಲಾಗಿದೆ.

416ನೇ ದಸರಾ ಮಹೋತ್ಸವ ಉದ್ಘಾಟನೆಗೆ ಕ್ಷಣ ಗಣನೆ ಆರಂಭವಾಗಿದೆ. ಚಾಮುಂಡಿ ಬೆಟ್ಟದಲ್ಲಿ ದಸರಾ ಉದ್ಘಾಟನೆಯ ಧಾರ್ಮಿಕ ವಿಧಿವಿಧಾನ ಗಳು ಅಂತಿಮ ಹಂತಕ್ಕೆ ಬಂದಿವೆ. ಪ್ರಧಾನ ಅರ್ಚಕ ಶಶಿಶೇಖರ್ ದೀಕ್ಷಿತ್ ನೇತೃತ್ವದಲ್ಲಿ ಚಾಮುಂಡೇಶ್ವರಿ ತಾಯಿಯ ಉತ್ಸವ ಮೂರ್ತಿಯ ಶುದ್ಧಿ ಕಾರ್ಯ ನೆರವೇರಿದೆ.

ಅರಮನೆಯಿಂದ ತರಲಾಗಿರುವ ಮಹಿಷ ಮರ್ದಿನಿ ಅವತಾರದ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸಲಾಗಿದೆ. ನವರಾತ್ರಿಯ ಪ್ರತಿದಿನ ಪ್ರಾಣ ಪ್ರತಿಷ್ಠಾಪನೆ ಮಾಡಿ, ವಿಶೇಷ ಪೂಜೆ ನಡೆಯಲಿದೆ. ಭಾನುವಾರ ಚಾಮುಂಡೇಶ್ವರಿ ದೇವಾಲಯದ ಆವರಣದಲ್ಲಿ ನಿರ್ಮಿಸಿರುವ ಭವ್ಯ ವೇದಿಕೆಯಲ್ಲಿ ಉದ್ಘಾಟನೆ ಕಾರ್ಯಕ್ರಮ ಜರುಗಲಿದೆ. ಮೈಸೂರು ದಸರಾದ ಎಲ್ಲಾ ಕಾರ್ಯಕ್ರಮಗಳು ನಾಳೆ ಆರಂಭವಾಗಲಿವೆ. ಮೈಸೂರಿನಲ್ಲಿ ದಸರಾ ಸಂಭ್ರಮ ಕಳೆಗಟ್ಟಿದೆ.

### 21ರಂದು ಜಂಬೂಸವಾರಿ ಮೆರವಣಿಗೆ

**ಮೈಸೂರು:** ನಾಡಿನ ಅಧಿದೇವತೆ ಚಾಮುಂಡಿ ತಾಯಿಗೆ ಗಣ್ಯರು ವಿಶೇಷ ಪೂಜೆ ಸಲ್ಲಿಸುವ ಮೂಲಕ ನಾಡ ಹಬ್ಬ ದಸರಾ ಉದ್ಘಾಟನೆ ಆಗಲಿದೆ. ಬಳಿಕ 10 ದಿನ ಗಳ ಕಾಲ ವಿವಿಧ ರೀತಿಯ ವೈವಿಧ್ಯಮಯ ಕಾರ್ಯ ಕ್ರಮಗಳು ನಡೆಯಲಿವೆ. 11ನೇ ದಿನ ವಿಶ್ವವಿಖ್ಯಾತ ದಸರಾ ಜಂಬೂಸವಾರಿ ಮೆರವಣಿಗೆ ನಡೆಯಲಿದೆ.

ಅಕ್ಟೋಬರ್ 11ರಂದು ಶ್ರೀ ಗವಿಸಿದ್ದೇಶ್ವರ ಮಹಾ ಸ್ವಾಮಿಗಳು ದಸರಾ ಮಹೋತ್ಸವವನ್ನು ಉದ್ಘಾಟಿ ಸಿದ ಬಳಿಕ ವಿವಿಧ ಕಾರ್ಯಕ್ರಮಗಳಿಗೆ ಚಾಲನೆ ಸಿಗಲಿದೆ. ಅ.11ರ ಬೆಳಗ್ಗೆ 11:30ಕ್ಕೆ ಫಲಪುಷ್ಪ ಪ್ರದ ರ್ಶನ, ಮಧ್ಯಾಹ್ನ 12: 30ಕ್ಕೆ ಪುಷ್ಪ ಮೇಳ ಮತ್ತು ಸಸ್ಯ ತೋಟ ಉದ್ಘಾಟನೆ, ಸಂಜೆ 4 ಗಂಟೆಗೆ ದಸರಾ ಕುಸ್ತಿ ಪಂದ್ಯಾವಳಿ, ಕನ್ನಡ ಪುಸ್ತಕ ಮಾರಾಟ ಮೇಳ, ಸಂಜೆ 4:30ಕ್ಕೆ ಲಲಿತಕಲೆ ಮತ್ತು ಕರಕುಶಲ ಶಿಬಿರ, ರಾಜ್ಯ ದಸರಾ ಸಿಎಂ ಕಪ್ ಕ್ರೀಡಾಕೂಟ, ಸಂಜೆ 5 ಗಂಟೆಗೆ ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾ ಟನೆ ಮತ್ತು ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ ಪ್ರದಾನ ಸಮಾರಂಭ,

# ಸಿದ್ದು ರಹಸ್ಯ ಭೇಟಿ ಅಗತ್ಯವಿಲ್ಲ

## ನಮ್ಮ ನಾಯಕರ ಯಾವಾಗಲಾದರೂ ಭೇಟಿ: ಸಚಿವ ಸತೀಶ್ ಜಾರಕಿಹೊಳಿ

**ಬೆಳಗಾವಿ:** ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ನಮ್ಮ ನಾಯಕರು. ನಾವು ಯಾವಾಗ ಬೇಕಾ ದರೂ ಅವರನ್ನು ಭೇಟಿ ಮಾಡಬಹುದು. ಅವ ರನ್ನು ರಹಸ್ಯವಾಗಿ ಭೇಟಿಯಾಗುವ ಯಾವುದೇ ಅಗತ್ಯ ನಮಗಿಲ್ಲ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರನ್ನು ಸಚಿವ ಜಮೀರ್ ಅಹ್ಮದ್ ಮೂರು ಬಾರಿ ಭೇಟಿಯಾಗಿದ್ದಾರೆ. ಸಿದ್ದ ರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲೂ ನಾವು ಕಡಿಮೆ ಪ್ರಮಾಣದಲ್ಲೇ ಭೇಟಿಯಾಗುತ್ತಿದ್ದೆವು. ಹಾಗಾಗಿ ಇದರಲ್ಲಿ ಯಾವುದೇ ರಹಸ್ಯವಿಲ್ಲ ಎಂದು ಸ್ಪಷ್ಟನೆ ನೀಡಿದರು.

ರಾಜ್ಯ ರಾಜಕೀಯದಲ್ಲಿ ಭಾರೀ ಸದ್ದು ಮಾಡು



ತ್ತಿರುವ ಸ್ಟಿಂಗ್ ಆಪರೇಷನ್ ಕುರಿತು ಪ್ರತಿಕ್ರಿ ಯಿಸಿದ ಸಚಿವರು, ಹೌದು, ಪ್ರಸ್ತುತ ರಾಜ್ಯದಲ್ಲಿ ಸ್ಟಿಂಗ್ ವಿಚಾರ ತೀವ್ರ ಚರ್ಚೆಗೆ ಗ್ರಾಸವಾಗಿದೆ. ಯಾವುದೇ ಸಂದರ್ಭದಲ್ಲಿ ಸ್ಟಿಂಗ್ ಆಪರೇಷನ್ ಆಗಬಹುದು. ಎಲ್ಲರೂ ಹುಷಾರಾಗಿರಿ ಎಂದು ಮುಖ್ಯಮಂತ್ರಿಗಳೇ ನಮಗೆ ಎಚ್ಚರಿಕೆ ನೀಡಿದ್ದಾರೆ.

ಬೇರೆ ಬೇರೆ ವೇಷಗಳಲ್ಲಿ ಬಂದು, ಆಕರ್ಷಿಸಿ, ಆಪ್ ಮಾಡುವ ಸಾಧ್ಯತೆ ಇರುತ್ತದೆ ಎಂದು ತಿಳಿ ಸಿದ್ದಾರೆ ಎಂದರು.

ಸಿದ್ದರಾಮಯ್ಯ ಅವರನ್ನು ಅಧಿಕಾರದಿಂದ ಕೆಳಗಿಳಿಸುವುದಕ್ಕೂ ಈ ಸ್ಟಿಂಗ್ ಆಪರೇಷನ್ ಕಾರ ಣವೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ಅದರ ಬಗ್ಗೆ ನಮಗೆ ಯಾವುದೇ ಮಾಹಿತಿ ಇಲ್ಲ. ವೈಯಕ್ತಿಕವಾಗಿ ನಮಗೆ ಅಂತಹ ಅನುಭವವಾ ಗಿಲ್ಲ ಎಂದು ತಿಳಿಸಿದರು.

ದೆಹಲಿಯಲ್ಲಿ ಕಾಕ್ರೋಚ್ ಜನತಾ ಪಾರ್ಟಿ ನಾಯಕರನ್ನು ಪೊಲೀಸರು ವಶಕ್ಕೆ ಪಡೆದಿರುವ ಕ್ರಮವನ್ನು ಖಂಡಿಸಿದ ಸತೀಶ್ ಜಾರಕಿಹೊಳಿ, ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಶಾಂತಿಯುತ ಪ್ರತಿ ಭಟನೆ ಮಾಡುವ ಹಕ್ಕಿದೆ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ. ಕೇಂದ್ರ ಸರ್ಕಾರ ಪ್ರತಿ ಭಟನೆಯನ್ನು ಹತ್ತಿಕ್ಕುವ ಕೆಲಸಕ್ಕೆ ಕೈಹಾಕಿದರೆ, ಮುಂದೆ ಇದು ಮತ್ತಷ್ಟು ದೊಡ್ಡ ಪ್ರಮಾಣದಲ್ಲಿ ಭುಗಿಲೇಳುತ್ತದೆ ಎಂದು ಎಚ್ಚರಿಸಿದರು.

ಸಿಜೆಪಿ ಯಾವುದೇ ರಾಜಕೀಯ ಪಕ್ಷದ ಜೊತೆ ಗುರುತಿಸಿಕೊಂಡಿಲ್ಲ. ಕೇಂದ್ರ ಸರ್ಕಾರ ಸಿಜೆಪಿ ನಾಯಕರನ್ನು ಕರೆದು ಮಾತುಕತೆ ನಡೆಸಿ ಸಮಸ್ಯೆ ಬಗೆಹರಿಸಬೇಕು. ಈ ಹಿಂದೆ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ವಿಚಾರದಲ್ಲೂ ಇದೇ ರೀತಿ ನಡೆದಿತ್ತು. ಇಂತಹ ಪರಿಸ್ಥಿತಿ ಏಕೆ ನಿರ್ಮಾಣವಾ ಗುತ್ತಿದೆ ಎಂದು ಬಿಜೆಪಿಯವರು ಆತ್ಮಾವಲೋಕನ ಮಾಡಿಕೊಳ್ಳಬೇಕು. ಪೊಲೀಸರನ್ನು ಮುಂದಿಟ್ಟು ಕೊಂಡು ಎಲ್ಲವನ್ನೂ ಹತ್ತಿಕ್ಕಲು ಸಾಧ್ಯವಿಲ್ಲ ಎಂದು ಎಚ್ಚರಿಕೆ ನೀಡಿದರು.

## ಕೆಎಸ್ಆರ್‌ಟಿಸಿ ಬಸ್‌ಗೆ ಡಿಸೇಲ್ ಕೊರತೆ: 100 ಕೋಟಿ ಬಿಡುಗಡೆ

**ಬೆಂಗಳೂರು:** ರಾಜ್ಯ ಸರ್ಕಾರಿ ಬಸ್‌ಗಳಿಗೆ ಡಿಸೇಲ್ ಅಭಾವದ ಉಂಟಾಗಿದ್ದ ಬೆನ್ನಲ್ಲೇ ಸರ್ಕಾರ ಕೊನೆಗೂ ಎಚ್ಚೆತ್ತುಕೊಂಡಿದೆ. ರಾಜ್ಯದ 4 ನಿಗಮದ ಬಸ್‌ಗಳಿಗೆ ಡಿಸೇಲ್‌ಗಾಗಿ 100 ಕೋಟಿ ರೂ. ಬಿಡುಗಡೆ ಮಾಡಿದೆ.

ಕೆಎಸ್ಆರ್‌ಟಿಸಿಗೆ–18.90 ಕೋಟಿ ರೂ., ಬಿಎಂಟಿಸಿಗೆ 62.53 ಕೋಟಿ ರೂ., ಎನ್‌ಡಬ್ಲ್ಯೂಕೆಎಸ್ಆರ್‌ಟಿಸಿ–7.96 ಕೋಟಿ ರೂ. ಹಾಗೂ ಕೆಕೆಆರ್ ಟಿಸಿಗೆ–10.61 ಕೋಟಿ ರೂ.ಯಂತೆ ಒಟ್ಟು 100 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದೆ.

ಹಿಂದೂಸ್ಥಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್‌ಗೆ (ಎಚ್‌ಪಿಸಿಎಲ್) 1124.91 ಕೋಟಿ ರೂ. ಡಿಸೇಲ್ ಹಣವನ್ನು ಸಾರಿಗೆ ಇಲಾಖೆ ನೀಡಬೇಕಿದೆ. ಈಗ 100 ಕೋಟಿ ರೂ. ರಿಲೀಸ್ ಆಗಿರೋ ಹಿನ್ನೆಲೆ, ಇನ್ನೂ 1004 ಕೋಟಿ



ರೂ. ಹಣವನ್ನು ಸಾರಿಗೆ ಇಲಾಖೆ ಬಾಕಿ ಉಳಿಸಿಕೊಂಡಿದೆ.

ರಾಜ್ಯ ಸರ್ಕಾರದಿಂದ ಅಕ್ಟೋಬರ್ ತಿಂಗಳ ಶಕ್ತಿ ಅನುದಾನವನ್ನು ಸರ್ಕಾರ ಬಿಡುಗಡೆಗೊಳಿಸಿದೆ. ನಾಲ್ಕು ಸಾರಿಗೆ ನಿಗಮಗಳಿಗೆ 430 ಕೋಟಿ ರಿಲೀಸ್ ಆಗಿದೆ. ಹಾಗೆಯೇ ಜೂನ್, ಜುಲೈ, ಆಗಸ್ಟ್ ಹಾಗೂ ಸೆಪ್ಟೆಂಬರ್ ತಿಂಗಳ ಶಕ್ತಿ ಹಣದ ವೆಚ್ಚದಲ್ಲಿ 2,15,000 ಲಕ್ಷ ರೂಪಾಯಿ ಮುಂಗಡ ಬಿಡುಗಡೆಗೆ ಆದೇಶಿಸಿದೆ.

## 283 ಔಷಧಗಳ ದರ ಇಳಿಕೆ: ಸಚಿವ ಖಾದರ್

**ಬೆಂಗಳೂರು:** ಅತಿ ಹೆಚ್ಚು ಬೆಲೆ ನಿಗದಿ ಮಾಡಿದ್ದ 283 ಔಷಧಗಳ ದರ ಇಳಿಕೆಗೆ ಕೇಂದ್ರ ಸರ್ಕಾರ ಆದೇಶಿಸಿದೆ ಎಂದು ಆರೋಗ್ಯ ಸಚಿವ ಯುಟಿ ಖಾದರ್ ತಿಳಿಸಿದರು.

ನಗರದಲ್ಲಿ ಶನಿವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಕರ್ನಾಟಕ ರಾಜ್ಯಕ್ಕೆ ಇದು ಐತಿಹಾಸಿಕ ದಿನ. ಚಿಕಿತ್ಸೆ ಪಡೆಯುವಾಗ ಆಗುವ ನೋವು ಅರ್ಥ ಮಾಡಿಕೊಂಡು ಸಮಸ್ಯೆಗೆ ಪರಿಹಾರಕ್ಕಾಗಿ ಕೇಂದ್ರಕ್ಕೆ ಪತ್ರ ಬರೆದಿದ್ದೆವು. ಅದರ ಸಫಲತೆ ಸಿಕ್ಕಿದೆ. ಕ್ಯಾನ್ಸರ್ ಔಷಧಿಗೆ ಹೆಚ್ಚು ದರ ನಿಗದಿ ಮಾಡಿದ್ದರು ಅದಕ್ಕೆ ಪತ್ರ ಬರೆ



ದಿದ್ದೆವು. ನಮ್ಮ ಅಧಿಕಾರಿಗಳು ಪಟ್ಟ ಶ್ರಮಕ್ಕೆ ಉತ್ತಮ ಸ್ಪಂದನೆ ಸಿಕ್ಕಿದೆ ಎಂದು ಹೇಳಿದರು.

ಇನ್ನುಮುಂದೆ ಉತ್ಪಾದನಾ ವೆಚ್ಚ ಎಷ್ಟು? ಮಾರಾಟ ವೆಚ್ಚ ಎಷ್ಟು?

## ಬಿಜೆಪಿ ಸರ್ಕಾರ ಬೀಳುತ್ತೆ: ರಾಗಾ

**ನವದೆಹಲಿ:** ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ರಾಜೀನಾಮೆ ಅಷ್ಟೇ ಅಲ್ಲ, ಈ ಸರ್ಕಾರ ಶೀಘ್ರವೇ ಬೀಳಲಿದೆ. ದೇಶದಲ್ಲಿ ಪ್ರಜಾಪ್ರಭುತ್ವವನ್ನು ಮರುಸ್ಥಾಪಿಸಲಾಗುತ್ತದೆ ಎಂದು ರಾಹುಲ್ ಗಾಂಧಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಸಂಸತ್ತಿನ ಸೆಂಟ್ರಲ್ ಹಾಲ್‌ನಲ್ಲಿ ಇಂಡಿಯಾ ಮೈತ್ರಿಕೂಟದ ಸಂಸದರನ್ನು ಉದ್ದೇಶಿಸಿ ಮಾತನಾಡಿರುವ ವಿಡಿಯೋ ತುಣುಕನ್ನು ರಾಹುಲ್ ಗಾಂಧಿ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ.

ಜ್ಞಾನೇಶ್ ಕುಮಾರ್ ರಾಜೀನಾಮೆಗೆ ಒತ್ತಾಯಿಸಿ ದೆಹಲಿಯ ಜಂತರ್ ಮಂತರ್‌ನಲ್ಲಿ ಕಾಕ್ರೋಚ್ ಜನತಾ ಪಾರ್ಟಿ ಪ್ರತಿಭಟನೆ ಸಂದರ್ಭದಲ್ಲೇ ರಾಹುಲ್ ಗಾಂಧಿ ಈ ಹೇಳಿಕೆ ನೀಡಿದ್ದಾರೆ.

ದೆಹಲಿ ಪೊಲೀಸ್ ಪ್ರತಿಭಟನೆಯನ್ನು ಹತ್ತಿಕ್ಕಲು ಮುಂದಾಗಿದೆ. ಈ ವೇಳೆ ರಾಹುಲ್ ಗಾಂಧಿಯವರ ಈ ವಿಡಿಯೋ ಸೋಷಿಯಲ್ ಮೀಡಿಯಾದಲ್ಲಿ ಸಂಚಲನ ಉಂಟು ಮಾಡಿದೆ.

ರಾಹುಲ್ ಗಾಂಧಿಯ ಪುಟ 2ಕ್ಕೆ



## ಮೆಟ್ರೋ ರೈಲು ನಿರ್ಬಂಧ: ನ್ಯಾಯಾಂಗ ನಿಂದನೆ ಅರ್ಜಿ

**ನವದೆಹಲಿ:** ರಾಜಧಾನಿ ದೆಹಲಿ ಮೆಟ್ರೋ ರೈಲು ಮತ್ತು ನಿಜಾಮುದ್ದೀನ್, ನವದೆಹಲಿ ರೈಲ್ವೆ ನಿಲ್ದಾಣಗಳಿಗೆ ಬರುವ ರೈಲುಗಳ ಸಂಚಾರದ ಮೇಲೆ ಹೇರಲಾಗಿರುವ ನಿರ್ಬಂಧವನ್ನು ಪ್ರಶ್ನಿಸಿ ದೆಹಲಿ ಪೊಲೀಸರ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಲಾಗಿದೆ.

ವಕೀಲರಾದ ಶೈಲೇಂದ್ರ ಮಣಿ ತ್ರಿಪಾಠಿ ಮತ್ತು ಚಾಂದ್ ಖುರೇಷಿ ಅರ್ಜಿ ಸಲ್ಲಿಸಿದ್ದಾರೆ. ನ್ಯಾಯಾಲಯದ ಆದೇಶವಿದ್ದರೂ ದೆಹಲಿ ಪೊಲೀಸರು ಮೆಟ್ರೋ ನಿಲ್ದಾಣ ಮತ್ತು ರೈಲು ಸೇವೆ ಮೇಲೆ ಅಕ್ರಮವಾಗಿ ನಿರ್ಬಂಧ ಹೇರಿದ್ದಾರೆ ಎಂದು ಅರ್ಜಿ



ಯಲ್ಲಿ ದೂರಿದ್ದಾರೆ.

ಮೆಟ್ರೋ ರೈಲುಗಳ ಸಂಚಾರ ಹಾಗೂ ನಿಜಾಮುದ್ದೀನ್ ಮತ್ತು ನವದೆಹಲಿ ರೈಲ್ವೆ ನಿಲ್ದಾಣಗಳಿಗೆ ರೈಲುಗಳ ಆಗಮನದ ಮೇಲೆ ಸಂಪೂರ್ಣ ನಿರ್ಬಂಧ ಹೇರಿರುವುದು ಮಿತಿ ಮೀರಿದ ಕ್ರಮ. ಪುಟ 2ಕ್ಕೆ

# ಧರ್ಮ ವಿಭಜನೆ ಮಾಡಲ್ಲ

## ಉತ್ತರ ಕರ್ನಾಟಕದ 25ಕ್ಕೂ ಶ್ರೀಗಳ ಜೊತೆ ಡಿಕೆಶಿ ಮಾತು

**ಬೆಂಗಳೂರು:** ನಾವು ಸೂಜಿಯಂತೆ ಹೊಲಿ ಯುವ ಕೆಲಸ ಮಾಡುತ್ತೇವೆ. ಕತ್ತರಿಯಂತೆ ಕತ್ತರಿಸುವ ಕೆಲಸ ಮಾಡುವುದಿಲ್ಲ. ಒಗ್ಗಟ್ಟಿವ ನಲ್ಲಿ ಶಕ್ತಿ ಇದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಭಿಪ್ರಾಯಪಟ್ಟರು.

ಗೃಹ ಕಚೇರಿ ಕೃಷ್ಣಾದಲ್ಲಿ ಶಿರಹಟ್ಟಿ ಭಾವೈ ಕ್ಯತಾ ಫಕೀರೇಶ್ವರ ಮಠದ ದಿಂಗಾಲೇಶ್ವರ ಸ್ವಾಮೀಜಿ ನೇತೃತ್ವದಲ್ಲಿ ಶನಿವಾರ ತಮ್ಮನ್ನು ಭೇಟಿಯಾದ ಉತ್ತರ ಕರ್ನಾಟಕ ಭಾಗದ 25ಕ್ಕೂ ಹೆಚ್ಚು ಮಠಗಳ ಸ್ವಾಮೀಜಿಗಳ ನಿಯೋಗದ ಜೊತೆ ಅವರು ಮಾತನಾಡಿದರು.

ಈ ಹಿಂದೆ ವೀರಶೈವ, ಲಿಂಗಾಯತ ಬೇರೆ ಮಾಡಲು ಹೋದಾಗ ಸಮುದಾ ಯದ ಗುರುಗಳ ಕ್ಷಮೆ ಕೇಳಿದ್ದೆ. ನಮ್ಮದು ಸಮಾಜ ಒಗ್ಗೂಡಿಸುವ ಧರ್ಮ. ವಿಭಜನೆ ಮಾಡುವುದಲ್ಲ ಎಂದು

ದಸರಾ ಉದ್ಘಾಟನೆಯನ್ನು



ಕೊಪ್ಪಳ ಗವಿಸಿದ್ದೇಶ್ವರ ಮಠಗಳ ಶ್ರೀಗಳು ನೆರವೇರಿಸ ಲಿದ್ದಾರೆ. ಆ ಮಠದ, ಶ್ರೀಗಳ ಕೆಲಸ ನೋಡಿ ದ್ದೇನೆ. ಅವರ ವ್ಯಕ್ತಿತ್ವ ದೊಡ್ಡದು. ಅವರನ್ನು ಇಡೀ ರಾಜ್ಯ ಒಪ್ಪಿದೆ. ಶ್ರೀಗಳು ಉದ್ಘಾಟನೆಗೆ ಒಪ್ಪಿದ್ದಾರೆ. ಆದರೆ, ಕೆಲವರು ಅದರಲ್ಲೂ ರಾಜಕೀಯ ಮಾಡಲು ನೋಡಿದರು. ಸ್ವಾಮಿಗಳು ಒಪ್ಪಿಲ್ಲವೆಂದು ಸುಳ್ಳು ಸುದ್ದಿ ಹಬ್ಬಿಸಿದರು ಎಂದು ಹೇಳಿದರು.

ಚೆನ್ನೈನ ಆಸ್ಪತ್ರೆಯಲ್ಲಿ ಸಿದ್ದಗಂಗಾ ಶ್ರೀ ಗಳಿಗೆ ಮುಸ್ಲಿಂ ವೈದ್ಯರು ಶಸ್ತ್ರಚಿಕಿತ್ಸೆ ನಡೆಸಿ ದರು. ಆಗ ನಾನು ಧರ್ಮ, ಜಾತಿ ಎಂಬುದು ಮಾನವೀಯತೆಯಲ್ಲಿ ಇದೆ. ಎಲ್ಲರೂ ಒಂದೇ ಎಂದು ಹೇಳಿದಾಗ ಬಹಳ ಜನ ಟೀಕೆ ಮಾಡಿದರು. ಆದರೆ ನಾನು ತಲೆ ಕೆಡಿಸಿಕೊಳ್ಳಲಿಲ್ಲ ಎಂದು ಹೇಳಿದರು.

ಸರ್ಕಾರ ಏನೇ ಮಾಡಬಹುದು. ಆದರೆ, ಗುರುಗಳ ಹಾಗೂ ಗುರುಮಠಗಳ ಕಾರ್ಯಗಳು ಶ್ಲಾಘನೀಯ. ಗುರು ಇಲ್ಲದೇ ಒಂದು ಹೆಜ್ಜೆ ಮುಂದೆ ಇಡಲು ಆಗದು. ನನಗೆ ಸಿಕ್ಕಿರುವ ಅವಕಾಶದಲ್ಲಿ ಜನರ ಹೃದಯ ಗೆದ್ದು, ಕೆಲಸ ಮಾಡುತ್ತೇನೆ ಎಂದು ಸಿಎಂ ಹೇಳಿದರು.

# ಪ್ರಜಾಪ್ರಭುತ್ವ ಉಳಿಸಲು ಹೋರಾಟ

## ರಾಜ್ಯದಲ್ಲಿ ಎಸ್ಐಆರ್ ಅಕ್ರಮ ಬಯಲಿಗೆ: ಸಿಎಂ





**ನವದೆಹಲಿ:** ದೇಶದಲ್ಲಿ ಪ್ರಜಾಪ್ರಭುತ್ವ ಉಳಿಸುವ ನಿಟ್ಟಿನಲ್ಲಿ ಹೋರಾಟ ನಡೆಯುತ್ತಿದೆ. ಕರ್ನಾಟಕದಲ್ಲಿ ಎಸ್ಐಆರ್ ಅಕ್ರಮವನ್ನು ನಾನು ಬಯಲಿಗೆ ತಂದಿದ್ದೇನೆ. ಒಂದೇ ಒಂದು ಮತವನ್ನೂ ತೆಗೆದು ಹಾಕಲು ಬಿಡಲ್ಲ ಎಂದು ಸಿಎಂ ಡಿ.ಕೆ.ಶಿವಕುಮಾರ್ ಎಚ್ಚರಿಕೆ ನೀಡಿದರು.

ದೆಹಲಿಯಲ್ಲಿ ಇಂಡಿ ಒಕ್ಕೂಟದ ಪ್ರತಿ ಭಟನೆ ವೇಳೆ ಮಾಧ್ಯಮಗಳೊಂದಿಗೆ ಅವರು ಮಾತನಾಡಿದರು. ಪ್ರಜಾಪ್ರಭುತ್ವ ಉಳಿಸುವ ನಿಟ್ಟಿನಲ್ಲಿ ಈ ಹೋರಾಟ ನಡೆಯುತ್ತಿದೆ. ಮತದಾ ರರ ಹಕ್ಕನ್ನು ಉಳಿಸಬೇಕು ಎಂದು ಕರೆ ನೀಡಿದರು. ಬ್ಯಾಲೆಟ್ ಪೇಪರ್ ಉಳಿಸಬೇಕು. ಸಂವಿ ಧಾನದ ಹಕ್ಕನ್ನು ಕಾಪಾಡಬೇಕು ಅಂತಾ ಹೋರಾಟ ಮಾಡ್ತಾ ಇದ್ದೇವೆ. ಪ್ರತಿ ರಾಜ್ಯದಲ್ಲೂ ಒಂದೊಂದು ಕೋಟಿ ಮತದಾರರನ್ನ ತೆಗೆಯುತ್ತಿದ್ದಾರೆ. ಬಡ ವರು, ಅಲ್ಪಸಂಖ್ಯಾತರ ಮತಗಳನ್ನ ತೆಗೆಯುತ್ತಿ ದ್ದಾರೆ. ಈ ರೀತಿ ಮಾಡಿ ಚುನಾವಣೆ ಗೆಲ್ಲೋದು ಸರಿಯಲ್ಲ. ನಾನು ರಾಜ್ಯದ ಸಿಎಂ ಆಗಿ ಹೋರಾಟ ಮಾಡ್ತಾ ಇದ್ದೀನಿ ಎಂದು ಹೇಳಿದರು.

ನಾವು ಹೋರಾಟ ಮಾಡಿದ್ದು ಒಂದು ಪಕ್ಷವಾಗಿ ಅಲ್ಲ. ಮುಖ್ಯಮಂತ್ರಿ ಆಗಿ, ಮತದಾ ರರ ಹಕ್ಕು ರಕ್ಷಣೆ ಮಾಡಿದ್ದೇವೆ. ನಮ್ಮ ರಾಜ್ಯದಲ್ಲಿ ನಾವು ಹೋರಾಟ ಮುಂದುವರಿಸುತ್ತೇವೆ. ಕೇಂದ್ರದಲ್ಲಿ ಇರುವ ಭ್ರಷ್ಟ ಸರ್ಕಾರ, ವೋಟ್ ಚೋರಿ ಮಾಡಿ ಬಂದಿರೋ ಸರ್ಕಾರ ತೊಲಗಬೇಕು ಎಂದು ವಾಗ್ದಾಳಿ ನಡೆಸಿದರು.



## ದೆಹಲಿಯಲ್ಲಿ ಭುಗಿಲೆದ್ದ ಆಕ್ರೋಶ

### ಮೂವರು ಮಾಜಿ ಸಿಎಂ ಸೇರಿ ಸಾವಿರಾರು ಮಂದಿ ಬಂಧನ

**ನವದೆಹಲಿ:** ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ರಾಜೀನಾಮೆಗೆ ಆಗ್ರಹಿಸಿ ಕಾಕ್ರೋಚ್ ಜನತಾ ಪಾರ್ಟಿ ಹಮ್ಮಿಕೊಂಡಿದ್ದ ಜಂತರ್ ಮಂತರ್ ಪ್ರತಿಭಟನೆ ಶುರುವಾ ಗುವ ಮುನ್ನವೇ ಮೂವರು ಮಾಜಿ ಮುಖ್ಯಮಂತ್ರಿಗಳು ಸೇರಿದಂತೆ 2,000ಕ್ಕೂ ಹೆಚ್ಚು ಪ್ರತಿಭಟನಾಕಾರರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಸಿಜೆಪಿಗೆ ಹೋರಾಟಕ್ಕೆ ಬೆಂಬಲ ಸೂಚಿಸಿ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ಬಂದಿದ್ದ ಮಾಜಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿ ವಾಲ್ (ದೆಹಲಿ), ಮಮತಾ ಬ್ಯಾನರ್ಜಿ (ಪಶ್ಚಿಮ ಬಂಗಾಳ) ಮತ್ತು ಪಿಣರಾಯಿ ವಿಜಯನ್ (ಕೇರಳ) ಅವರನ್ನು ಪೊಲೀಸರು ಬಂಧಿಸಿದರು.

ಸಿಜೆಪಿ ಸಂಸ್ಥಾಪಕ ಅಭಿಜಿತ್ ದೀಪ್ಕೆ ಹಾಗೂ ಸೌರವ್ ದಾಸ್ ಮತ್ತು ಅಶು ತೋಷ್ ರಾಂಕಾ ಅವರು ಮುಂಬೈನಿಂದ ದೆಹಲಿ ವಿಮಾನ ನಿಲ್ದಾಣಕ್ಕೆ ತಲುಪಿದ ತಕ್ಷ ಣವೇ ಪೊಲೀಸರು ಅವರನ್ನು ವಶಕ್ಕೆ ಪಡೆ ದುಕೊಂಡಿದ್ದಾರೆ. ಪ್ರತಿಭಟನೆ ಹತ್ತಿಕ್ಕುವ ನಿಟ್ಟಿ ನಲ್ಲಿ ಪೊಲೀಸರು ಈ ಕ್ರಮ ಕೈಗೊಂಡಿದ್ದಾರೆ. ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸಲು ಪೊಲೀಸರು ಅನುಮತಿ ನಿರಾಕರಿಸಿದ್ದಾರೆ.

# ವನ್ಯಜೀವಿ ಸಫಾರಿಗಳಲ್ಲಿ ಮೊಬೈಲ್ ಬಳಕೆ ನಿರ್ಬಂಧ

ಚಾಮರಾಜನಗರ: ವನ್ಯಜೀವಿ ಸಫಾರಿಗಳಲ್ಲಿ ಮೊಬೈಲ್ ಫೋನ್ ಬಳಕೆಯನ್ನು ಸಂಪೂರ್ಣ ನಿರ್ಬಂಧಿಸಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ವನ್ಯಜೀವಿ ಪರಿಪಾಲಕ ಕುಮಾರ್ ಪುಷ್ಕರ್ ಆದೇಶ ಹೊರಡಿಸಿದ್ದಾರೆ.

ಸುಪ್ರೀಂಕೋರ್ಟ್ ಆದೇಶದನ್ವಯ ಓಖಿಅಂ ಕಾರ್ಯದರ್ಶಿಗಳ ಜೊತೆ ವಿಡಿಯೋ ಸಂವಾದ ಸಭೆ ನಡೆಸಿ ವನ್ಯಜೀವಿ ಸಫಾರಿಗಳಲ್ಲಿ ಪ್ರವಾಸಿಗರು, ಚಾಲಕರು ಮತ್ತು ಗೈಡ್‌ಗಳ ಮೊಬೈಲ್ ಬಳಕೆಯನ್ನು ಸಂಪೂರ್ಣ ನಿರ್ಬಂಧಿಸಿ ಆದೇಶಿಸಲಾಗಿದೆ. ಜೊತೆಗೆ, ತುರ್ತು ಸಂವಹನಕ್ಕಾಗಿ ಎಲ್ಲಾ ಸಫಾರಿ ವಾಹನಗಳಿಗೂ ವೈರ್?ಲೆಸ್ ವ್ಯವಸ್ಥೆ ಅಳವಡಿಸುವಂತೆ ಸೂಚಿಸಿದ್ದಾರೆ. ಚಾಮರಾಜನಗರ ಜಿಲ್ಲೆಯಲ್ಲಿ ಬಂಡೀಪುರ, ಕೆ.ಗುಡಿ, ಪಿ.ಜಿ. ಪಾಳ್ಯ ಹಾಗೂ ಗೋಪಿನಾಥಂನಲ್ಲಿ ವನ್ಯಜೀವಿ ಸಫಾರಿ ನಡೆಯಲಿದೆ. ಈ ಬಗ್ಗೆ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಜಿ.ಎಸ್. ಬೆಟ್ಟ ವಲಯ ಅರಣ್ಯಾಧಿಕಾರಿ ಸತೀಶ್ ಕುಮಾರ್ ಪ್ರತಿಕ್ರಿಯಿಸಿ ಬಂಡೀಪುರ ಸಫಾರಿಯಲ್ಲಿ ಸೋಮವಾರದ ನಂತರ ಈ ನೂತನ ಆದೇಶ ಜಾರಿ ಮಾಡಲಾಗುವುದು ಎಂದು ತಿಳಿಸಿದರು.

ಈ ಹಿಂದೆ ಸಫಾರಿ ಸಂದರ್ಭದಲ್ಲಿ ಮೊಬೈಲ್ ಫೋನ್‌ಗಳನ್ನು ಏರೋಪ್ಲೇನ್ ಮೋಡ್?ನಲ್ಲಿರಿಸಿ ದೃಶ್ಯಗಳನ್ನು ಸೆರೆ ಹಿಡಿಯಲು ಅವಕಾಶ ಕಲ್ಪಿಸಲಾಗಿತ್ತು.



ಸುಪ್ರೀಂ ಆದೇಶ ಏನು? ಹುಲಿ ಸಂರಕ್ಷಿತ ಪ್ರದೇಶದ ಕೋರ್ ಪ್ರದೇಶಗಳಲ್ಲಿ ಮೊಬೈಲ್ ಬಳಕೆಗೆ ಅನುಮತಿಸಬಾರದು ಎಂದು ಆದೇಶಿಸಿ ಮುಂದಿನ ಕ್ರಮ ವಹಿಸುವಂತೆ ಆದೇಶಿತ್ತು. ಅದರಂತೆ, ವನ್ಯಜೀವಿ ಸಫಾರಿಯಲ್ಲಿ ಚಾಲಕರು, ಪ್ರವಾಸಿಗರು ಮತ್ತು ಗೈಡ್‌ಗಳು ತಮ್ಮ ಮೊಬೈಲ್ ಫೋನ್‌ಗಳನ್ನು ಏರೋಪ್ಲೇನ್ ಮೋಡ್‌ನಲ್ಲಿರಿಸಿ ದೃಶ್ಯಗಳನ್ನು ಸೆರೆ ಹಿಡಿಯಲು ಅವಕಾಶ ಕಲ್ಪಿಸಲಾಗಿತ್ತು. ಮುಂದುವರೆದು, ಕಳೆದ ಸೆಪ್ಟಂಬರ್? 15 ರಂದು ಓಖಿಅಂ ಕಾರ್ಯದರ್ಶಿ ಜೊತೆ ಸಭೆ ನಡೆಸಿ ರಾಜ್ಯದ ಕೋರ್ ಭಾಗಗಳಲ್ಲಿನ ಪ್ರವಾಸೋದ್ಯಮ ವಲಯಗಳಲ್ಲಿ ಮೊಬೈಲ್ ಬಳಕೆಯನ್ನು ಸಂಪೂರ್ಣವಾಗಿ ನಿರ್ಬಂಧಿಸಲಾಗಿದೆ ಎಂದು ಅಕ್ಟೋಬರ್? 9 ರಂದು ಹೊರಡಿಸಿರುವ ಆದೇಶದಲ್ಲಿ ಪಿಸಿಸಿಎಫ್ ಕುಮಾರ್ ಪುಷ್ಕರ್ ತಿಳಿಸಿದ್ದರು.

# ನವರಾತ್ರಿ ಪ್ರಯುಕ್ತ ಧಾರ್ಮಿಕ ಕೈಂಕರ್ಯ

ರಾಮನಗರ; ನಗರದ ಎಂ.ಜಿ.ರಸ್ತೆಯಲ್ಲಿರುವ ಶ್ರೀ ಕನ್ಯಕಾಪರಮೇಶ್ವರಿ ಅಮ್ಮನವರ ದೇವಾಲಯದಲ್ಲಿ ನವರಾತ್ರಿ ಪ್ರಯುಕ್ತ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆರ್ಯ ವೈಶ್ಯ ಸಭಾ, ವಾಸವಿ ವನಿತಾ ಸಂಘ ಮತ್ತು ಶ್ರೀ ವಾಸವಿ ಯೂತ್ಸ್ ಫೋರಂ ಸಂಘಟನೆಗಳು ಹಮ್ಮಿಕೊಂಡಿವೆ.

ನವರಾತ್ರಿ ಪ್ರಯುಕ್ತ ಅಕ್ಟೋಬರ್ 11ರಿಂದ 20ರವರೆಗೆ ನಿರಂತರವಾಗಿ ಕಾರ್ಯಕ್ರಮಗಳು ನಡೆಯಲಿವೆ. ಶ್ರೀ ಮಾತೆಗೆ ದಿನನಿತ್ಯ ಅಲಕಾರ ಸೇವೆಯನ್ನು ಹಮ್ಮಿಕೊಳ್ಳಲಾಗಿದೆ. ಪ್ರಥಮ ದಿನ ಶ್ರೀ ಅಭಿರಾಮಿ ದೇವಿ ಅಲಂಕಾರ, ದ್ವಿತೀಯ ದಿನ ಅರಿಶಿನ ಕುಂಕುಮ ಅಲಂಕಾರ, ತೃತೀಯ ದಿನ ಶ್ರೀ ಸಂತಾನ ಲಕ್ಷ್ಮಿ ದೇವಿ ಅಲಂಕಾರ, ಚತುರ್ಥಿ ದಿನ ಶ್ರೀ ಆಂಡಾಳ್ ಮಾತೆಯ ಅಲಂಕಾರ, ಪಂಚಮಿ ದಿನ ಶ್ರೀ ಅನ್ನಪೂರ್ಣೇಶ್ವರಿ ದೇವಿ ಅಲಂಕಾರ, ಷಷ್ಠಿ ದಿನ ವಾರಾಹಿ ಮಾತೆಯ ಅಲಂಕಾರ, ಸಪ್ತಮಿ ದಿನ ಸರಸ್ವತಿ ದೇವಿ ಅಲಂಕಾರ, ಅಷ್ಟಮಿ ದಿನ ಶ್ರೀ ದುರ್ಗಾದೇವಿ ಅಲಂಕಾರ, ನವಮಿ ದಿನ ಭಾರತ ಮಾತಾ ಅಲಂಕಾರ ಮತ್ತು ದಶಮಿಯಂದು ಶ್ರೀ ಮಾತೆ ವಾಸವಿಗೆ ಚಿನ್ನದ ವಜ್ರಾಂಗಿಯನ್ನು ತೊಡಿಸಿ ಬಗೆಬಗೆಯ ಹೂವುಗಳಿಂದ ಸಿಂಗರಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.



ಧಾರ್ಮಿಕ ಕಾರ್ಯಕ್ರಮಗಳ ಜೊತೆಗೆ ಒಣದ್ರಾಕ್ಷಿ ಮತ್ತು ಬಾದಾಮಿಗಳಿಂದ ಅಷ್ಟೋತ್ತರ, ಭಜನಾ ಕಾರ್ಯಕ್ರಮಗಳು, ಸ್ಪರ್ಧಾ ಚಟುವಟಿಕೆಗಳು ಹೀಗೆ ವಿವಿಧ ಕಾರ್ಯಕ್ರಮಗಳು ನಡೆಯಲಿವೆ.

## ದೇಶಸೇವೆ ಸಲ್ಲಿಸಿ ನಿವೃತ್ತರಾದ ಬಿಎಸ್‌ಎಫ್ ಯೋಧರಿಗೆ ಸ್ವಾಗತ



ಗುಂಡ್ಲುಪೇಟೆ: ಗಡಿ ಭದ್ರತಾ ಪಡೆಯ (ಬಿಎಸ್‌ಎಫ್) ಯೋಧರಾದ ಶಿವಕುಮಾರ್ ಅವರು 29 ವರ್ಷ ಹಾಗೂ ಶಿವಯ್ಯ ಅವರು 26 ವರ್ಷಗಳ ಕಾಲ ದೇಶಸೇವೆ ಸಲ್ಲಿಸಿ ನಿವೃತ್ತರಾದ ಹಿನ್ನೆಲೆಯಲ್ಲಿ, ಕೆಬ್ಬೇಪುರ ಹುಲಿಯಮ್ಮನ ಸೇವಾ ಟ್ರಸ್ಟ್ ವತಿಯಿಂದ ಇಬ್ಬರು ಯೋಧರನ್ನು ಆತ್ಮೀಯವಾಗಿ ಸನ್ಮಾನಿಸಿ ಅದ್ದೂರಿಯಾಗಿ ಬರಮಾಡಿಕೊಳ್ಳಲಾಯಿತು.

ದೇಶದ ಗಡಿಗಳನ್ನು ಕಾಯುವ ಮೂಲಕ ದೀರ್ಘಕಾಲ ರಾಷ್ಟ್ರ ಸೇವೆಯಲ್ಲಿ ತೊಡಗಿಸಿಕೊಂಡು ನಿವೃತ್ತರಾದ ಯೋಧರನ್ನು ಅವರ ಕುಟುಂಬದ ಸದಸ್ಯರೊಂದಿಗೆ ಗೌರವದಿಂದ ಸ್ವಾಗತಿಸಲಾಯಿತು. ಯೋಧರ ಸೇವೆ, ತ್ಯಾಗ ಮತ್ತು ಕರ್ತವ್ಯನಿಷ್ಠೆಯನ್ನು ಸ್ಮರಿಸಿ ಗೌರವ ಸಲ್ಲಿಸಲಾಯಿತು.

ದೇಶದ ರಕ್ಷಣೆಗೆ ತಮ್ಮ ಜೀವನದ ಅಮೂಲ್ಯ ವರ್ಷಗಳನ್ನು ಮುಡಿಪಾಗಿಟ್ಟ ಯೋಧರನ್ನು ಗೌರವಿಸುವ ಮೂಲಕ ಕೆಬ್ಬೇಪುರ ಹುಲಿಯಮ್ಮನ ಸೇವಾ ಟ್ರಸ್ಟ್ ಮೆಚ್ಚುಗೆಗೆ ಪಾತ್ರವಾಯಿತು.

## ಪ್ರಧಾನ ದಸರಾ ಕವಿಗೋಷ್ಠಿಗೆ ಭೇರ್ಯ ರಾಮಕುಮಾರ್ ಆಯ್ಕೆ

**ಸಾಹಿತ್ಯ ಹಾಗೂ ಪರಿಸರ ಸೇವೆ ಪರಿಗಣಿಸಿ ಗೌರವ**

ಮೈಸೂರು: ಹಿರಿಯ ಸಾಹಿತಿ ಹಾಗೂ ಪರಿಸರ ಚಿಂತಕ ಡಾ. ಭೇರ್ಯ ರಾಮಕುಮಾರ್ ಅವರು ಮೈಸೂರು ದಸರಾ ಅಂಗವಾಗಿ ನಡೆಯಲಿರುವ ಪ್ರಧಾನ ಕವಿಗೋಷ್ಠಿಗೆ ಆಯ್ಕೆಯಾಗಿದ್ದಾರೆ.

ಭೇರ್ಯ ರಾಮಕುಮಾರ್ ಅವರು 'ನವಚೇತನ' ಹಾಗೂ 'ಬದುಕು' ಎಂಬ ಕವನ ಸಂಕಲನಗಳನ್ನು ಮತ್ತು 'ನಾವು ಬದುಕಲು ಬಿಡಿ' ಎಂಬ ನಾಟಕ ಸಂಕಲನವನ್ನು ಹೊರತಂದಿದ್ದಾರೆ. ಅವರ ಮತ್ತೊಂದು ಕವನ ಸಂಕಲನ 'ಬಾಳೊಂದು ಪಗಡೆಯಾಟ' ಶೀಘ್ರದಲ್ಲೇ ಲೋಕಾರ್ಪಣೆಯಾಗಲಿದೆ. 1985ರಿಂದ ಈವರೆಗೆ ಸುಮಾರು 200ಕ್ಕೂ ಹೆಚ್ಚು ಕವಿಗೋಷ್ಠಿಗಳಲ್ಲಿ ಕವನ ವಾಚನ ಮಾಡಿದ್ದಾರೆ.

### 365 ರಾಜ್ಯಮಟ್ಟದ ಸಾಹಿತ್ಯ ಕಾರ್ಯಕ್ರಮಗಳ ಸಂಘಟನೆ

ಸಾಹಿತ್ಯ ಸಂಘಟಕರಾಗಿಯೂ ಗುರುತಿಸಿಕೊಂಡಿರುವ ಭೇರ್ಯ ರಾಮಕುಮಾರ್ ಅವರು ಗ್ರಾಮಾಂತರ ಬುದ್ಧಿಜೀವಿಗಳ ಬಳಗದ ಅಧ್ಯಕ್ಷರಾಗಿ ಈವರೆಗೆ 365 ರಾಜ್ಯಮಟ್ಟದ ಸಾಹಿತ್ಯ ಕಾರ್ಯಕ್ರಮಗಳನ್ನು ಸಂಘಟಿಸಿದ್ದಾರೆ. ಪರಿಸರ ಚಿಂತಕರಾಗಿರುವ ಅವರು ಒಂದು ಸಾವಿರಕ್ಕೂ ಹೆಚ್ಚು ಶಾಲಾ-ಕಾಲೇಜುಗಳಲ್ಲಿ ಪರಿಸರ ಜಾಗೃತಿ ಉಪನ್ಯಾಸಗಳನ್ನು ನೀಡಿದ್ದಾರೆ.

### ಸಾಹಿತ್ಯ, ಪರಿಸರ ಸೇವೆಗೆ ಹಲವು ಪ್ರಶಸ್ತಿಗಳು

ಭೇರ್ಯ ರಾಮಕುಮಾರ್ ಅವರು ಸ್ವತಃ ನೇತ್ರದಾನಿ ಹಾಗೂ ದೇಹದಾನಿಯಾಗಿದ್ದು, ಮೈಸೂರಿನ ಕೆ.ಆರ್. ಆಸ್ಪತ್ರೆಗೆ ತಮ್ಮ ನೇತ್ರಗಳನ್ನು ಹಾಗೂ ಮೈಸೂರು ವೈದ್ಯಕೀಯ ಕಾಲೇಜಿಗೆ ತಮ್ಮ ದೇಹವನ್ನು ದಾನ ಮಾಡಲು ಒಪ್ಪಿಗೆ ಪತ್ರ ನೀಡಿದ್ದಾರೆ.

ಅವರ ಸಾಹಿತ್ಯ ಹಾಗೂ ಪರಿಸರ ಸೇವೆಯನ್ನು ಪರಿಗಣಿಸಿ 1993ರಲ್ಲಿ ಕೇಂದ್ರ ಸರ್ಕಾರದ ನೆಹರು ಯುವ ಪ್ರಶಸ್ತಿ, 2022ರಲ್ಲಿ ಮೈಸೂರು ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, 2023ರಲ್ಲಿ ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತಿನ ದತ್ತಿ ಪ್ರಶಸ್ತಿ, 2026ರಲ್ಲಿ ಪರಿಸರ ರತ್ನ ಪ್ರಶಸ್ತಿ ಹಾಗೂ 2026ರ ಪೂರ್ಣಚಂದ್ರ ತೇಜಸ್ವಿ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

### ಅ.17ರಂದು ಪ್ರಧಾನ ಕವಿಗೋಷ್ಠಿ

ಪ್ರಧಾನ ದಸರಾ ಕವಿಗೋಷ್ಠಿಯು ಮುಂಬರುವ ಅ.17ರಂದು ಮೈಸೂರಿನ ಮಾನಸಗಂಗೋತ್ರಿಯ ಕುವೆಂಪು ಅಧ್ಯಯನ ಸಂಸ್ಥೆಯ ಬಿಎಂಶ್ರೀ ಸಭಾಂಗಣದಲ್ಲಿ ನಡೆಯಲಿದೆ.

## ಅರಕಲವಾಡಿ ಪಿಎಸಿಸಿ ಬ್ಯಾಂಕ್ : 12.17 ಲಕ್ಷ ರೂ. ನಿವ್ವಳ ಲಾಭ

ಚಾಮರಾಜನಗರ, ತಾಲೂಕಿನ ಅರಕಲವಾಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವು 2025-26ನೇ ಸಾಲಿನಲ್ಲಿ ಉತ್ತಮವಾಗಿ ವಹಿವಾಟು ನಡೆಸಿ, 12.17 ಲಕ್ಷ ರೂ. ನಿವ್ವಳ ಲಾಭವನ್ನು ಪಡೆದುಕೊಂಡಿದೆ ಎಂದು ಸಂಘದ ಅಧ್ಯಕ್ಷ ಮಹದೇವಸ್ವಾಮಿ ತಿಳಿಸಿದರು.

ಸಂಘದ ಕಚೇರಿ ಅವರಣದಲ್ಲಿ ನಡೆದ ಅರಕಲವಾಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಅರಕಲವಾಡಿ ಸಹಕಾರ ಸಂಘವು ಕಳೆದ 25 ವರ್ಷಗಳ ಹಿಂದೆ ಸ್ಥಾಪನೆ ಮಾಡಿಕೊಂಡು ರೈತರು ಹಾಗೂ ಕೃಷಿ ಕಾರ್ಮಿಕರ ಹಿತ ರಕ್ಷಣೆಗಾಗಿ ಶ್ರಮಿಸುತ್ತಿದೆ. ಸಂಘದ ಸದಸ್ಯರಿಗೆ ಸರ್ಕಾರದಿಂದ ದೊರೆಯುವ ಶೂನ್ಯ ಬಡ್ಡಿ ದರ ಸಾಲ ಸೇರಿದಂತೆ ಅನೇಕ ಸವಲತ್ತುಗಳನ್ನು ಕಲ್ಪಿಸಿಕೊಡಲಾಗುತ್ತಿದೆ ಎಂದರು.

ಪ್ರಸಕ್ತ ವರ್ಷದಲ್ಲಿ ಸಂಘದಿಂದ 217 ಮಂದಿ ರೈತರಿಗೆ 2.44 ಕೋಟಿ ರು.ಗಳ ಬೆಳೆ ಸಾಲವನ್ನು ನವೀಕರಣ ಮಾಡಿ ಕೊಡಲಾಗಿದೆ. ಅಲ್ಲದೇ 33 ಮಂದಿ ಹೊಸ ಸದಸ್ಯರಿಗೆ 65 ಲಕ್ಷ ರೂ. ಸಾಲವನ್ನು ಎಂಡಿಸಿಸಿ ಬ್ಯಾಂಕಿನಿಂದ ಕೊಡಿಸಲಾಗಿದೆ. ಇದರೊಟ್ಟಿಗೆ ವಾಹನ ಸಾಲ, ಸ್ವ ಸಹಾಯ ಸಂಘಗಳಿಗೆ ಸಾಲ ಸೌಲಭ್ಯವನ್ನು ಕಲ್ಪಿಸಿಕೊಡಲಾಗಿದೆ. 150 ಮಂದಿ ಸದಸ್ಯರಿಗೆ ಯಶಸ್ವಿನಿ ವಿಮೆ ಸೇವೆಯನ್ನು ನೊಂದಾಣ ಮಾಡಿಸಿದ್ದು, ರೈತರು ಸಹ ಸಕಾಲದಲ್ಲಿ ಸಾಲ ಮರು ಪಾವತಿ ಮಾಡಿ ಶೂನ್ಯ ಬಡ್ಡಿ ದರದ ಸೌಲಭ್ಯವನ್ನು ಪಡೆದುಕೊಳ್ಳಿ ಎಂದು ಮಹದೇವಸ್ವಾಮಿ ತಿಳಿಸಿದರು.

ಗ್ರಾಮದ ಮುಖಂಡ ಎ.ಎಸ್. ಗುರುಸ್ವಾಮಿ ಮಾತನಾಡಿ, ಅರಕಲವಾಡಿ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಒಂದು ಇತಿಹಾಸ ಇದೆ. ಸಂಘವನ್ನುಉತ್ತಮವಾಗಿ ಮುನ್ನಡೆಸುವ ಜೊತೆಗೆ ಅರ್ಹ ರೈತರಿಗೆ ಸಾಲ ಸೌಲಭ್ಯವನ್ನು ಕಲ್ಪಿಸಿ ಅವರು ಆರ್ಥಿಕವಾಗಿ ಪ್ರಗತಿ ಸಾಧಿಸಲು ಸಹಕಾರಿಯಾಗಬೇಕು ಎಂದರು.

ಸಂಘದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವಿ.ಎಂ. ಸೋಮಶೇಖರ್ ವಾರ್ಷಿಕ ವರದಿಯನ್ನು ಮಂಡಿಸಿ ಅನುಮೋದನೆ ಪಡೆದುಕೊಂಡರು.

# ಫಲಾನುಭವಿಗಳಿಗೆ ಸೌಲಭ್ಯ ತಲುಪಿಸಿ

## ಅಧಿಕಾರಿಗಳಿಗೆ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಟಿ.ರಘುಮೂರ್ತಿ ಸೂಚನೆ

ಚಾಮರಾಜನಗರ: ಜಿಲ್ಲೆಯ ಪರಿಶಿಷ್ಟ ಪಂಗಡಗಳ ಸಮುದಾಯದ ಅರ್ಹ ಫಲಾನುಭವಿಗಳಿಗೆ ಸರ್ಕಾರದ ಸೌಲಭ್ಯಗಳು ಮತ್ತು ಸವಲತ್ತುಗಳನ್ನು ಸಮರ್ಪಕವಾಗಿ ತಲುಪಿಸಲು ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಕ್ರಮವಹಿಸಬೇಕು ಎಂದು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ಸಚಿವ ಟಿ. ರಘುಮೂರ್ತಿ ಕಟ್ಟುನಿಟ್ಟಿನ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗುರುವಾರ ಪರಿಶಿಷ್ಟ ಜಾತಿ ಉಪಯೋಜನೆ ಹಾಗೂ ಪರಿಶಿಷ್ಟ ಪಂಗಡಗಳ ವಿಶೇಷ ಘಟಕ ಯೋಜನೆಗಳಡಿ ಅನುಷ್ಠಾನಗೊಳಿಸುತ್ತಿರುವ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

### ಅನುದಾನ ಸಮರ್ಪಕ ಬಳಕೆಗೆ ಸೂಚನೆ

**ಜಿಲ್ಲೆಯಲ್ಲಿ 1,32,201 ಮಂದಿ ಪರಿಶಿಷ್ಟ ಸಮುದಾಯಗಳ ಜನರಿದ್ದಾರೆ. ಪರಿಶಿಷ್ಟ ಜಾತಿ ಉಪ ಯೋಜನೆ ಹಾಗೂ ಪರಿಶಿಷ್ಟ ಪಂಗಡಗಳ ವಿಶೇಷ ಘಟಕ ಯೋಜನೆಗಳಡಿ ಜಿಲ್ಲಾ ಮತ್ತು ತಾಲೂಕು ಮಟ್ಟದ ಕಚೇರಿಗಳಿಗೆ ಸಮುದಾಯದ ಜನರ ಸೌಲಭ್ಯಗಳಿಗಾಗಿ ಸರ್ಕಾರ ಬಿಡುಗಡೆ ಮಾಡುವ ಅನುದಾನವನ್ನು ಸಮರ್ಪಕವಾಗಿ ವೆಚ್ಚ ಮಾಡಬೇಕು. ಯಾವುದೇ ಫಲಾನುಭವಿಗಳು ಸೌಲಭ್ಯಗಳಿಂದ ವಂಚಿತರಾಗದಂತೆ ನೋಡಿಕೊಳ್ಳಬೇಕು ಎಂದು ಸಚಿವರು ಸೂಚಿಸಿದರು. ಸೌಲಭ್ಯ ವಿತರಣೆಗೆ ಸೂಕ್ತ ರೂಪುರೇಷೆ ಸಿದ್ಧಪಡಿಸಲು ಕಳೆದ ಮೂರು ವರ್ಷಗಳ ವಾರ್ಷಿಕ ಅಭಿವೃದ್ಧಿ ವರದಿಗಳನ್ನು ಅಧಿಕಾರಿಗಳು ಪರಿಶೀಲಿಸಬೇಕು. ಅರ್ಹ ಫಲಾನುಭವಿಗಳಿಗೆ ಸರ್ಕಾರದ ಸೌಲಭ್ಯಗಳು ತಲುಪುವಂತೆ ಅಧಿಕಾರಿಗಳು ಸಕ್ರಿಯವಾಗಿ ಕಾರ್ಯನಿರ್ವಹಿಸಬೇಕು ಎಂದು ನಿರ್ದೇಶನ ನೀಡಿದರು.**



### ಯೋಜನೆಗಳ ಅನುಷ್ಠಾನದಲ್ಲಿ ಸಾಧನೆ ಮುಖ್ಯ

**ಸರ್ಕಾರದ ಯೋಜನೆಗಳನ್ನು ಜನರಿಗೆ ಅಧಿಕಾರಿಗಳು ಅತ್ಯಂತ ಜವಾಬ್ದಾರಿಯುತವಾಗಿ ತಲುಪಿಸಬೇಕು. ಯೋಜನೆಗಳ ಅನುಷ್ಠಾನದಲ್ಲಿ ಕೇವಲ ಭೌತಿಕ ಗುರಿ ಸಾಧಿಸುವುದಷ್ಟೇ ಅಲ್ಲದೆ, ಫಲಾನುಭವಿಗಳಿಗೆ ಸೌಲಭ್ಯ ತಲುಪಿರುವುದೂ ಮುಖ್ಯವಾಗಿದೆ. ಸೌಲಭ್ಯಗಳು ತಲುಪಿರುವುದಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳು ಕಡತಗಳನ್ನು ಸಿದ್ಧಪಡಿಸುವುದಷ್ಟೇ ಸಾಲದು. ಅಗತ್ಯ ದಾಖಲಾತಿಗಳು ಕ್ರಮಬದ್ಧವಾಗಿರಬೇಕು ಎಂದು ಸಚಿವರು ಹೇಳಿದರು. ಜಿಲ್ಲೆಯಲ್ಲಿ 2,16,000 ರೈತರಿದ್ದು, ಬೆಳೆ ಸಮೀಕ್ಷೆಯ ಪ್ರಕಾರ 18,350 ರೈತರು ಮಾತ್ರ ವಿಮೆಗೆ ಒಳಪಟ್ಟಿದ್ದಾರೆ. ಈ ನಿಟ್ಟಿನಲ್ಲಿ ಇನ್ನಷ್ಟು ಪ್ರಗತಿ ಸಾಧಿಸಬೇಕು. ಸಹಕಾರ ಹಾಗೂ ಮೀನುಗಾರಿಕೆ ಇಲಾಖೆಗಳ ಯೋಜನೆಗಳ ಅನುಷ್ಠಾನದಲ್ಲಿ ಹೆಚ್ಚಿನ ಗುರಿ ನಿಗದಿಪಡಿಸಬೇಕು ಎಂದು ಸೂಚಿಸಿದರು.**

### ಪ್ರತಿ ತಿಂಗಳು ಪ್ರಗತಿ ವರದಿ ಸಲ್ಲಿಕೆ ಕಡ್ಡಾಯ

**ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಗೆ ಅಧಿಕಾರಿಗಳು ಕ್ರಮಬದ್ಧವಾದ ಮಾಹಿತಿಯನ್ನು ಒದಗಿಸಬೇಕು. ಪರಿಶಿಷ್ಟ ಪಂಗಡಗಳ ಜನರಿಗೆ ಸೌಲಭ್ಯಗಳನ್ನು ಒದಗಿಸುವ ಕುರಿತು ಸಮಗ್ರ ಪ್ರಗತಿ ವರದಿಯನ್ನು ಸಂಬಂಧಪಟ್ಟ ಎಲ್ಲ ಇಲಾಖೆಗಳ ಅಧಿಕಾರಿಗಳು ಪ್ರತಿ ತಿಂಗಳು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗೆ ಸಲ್ಲಿಸಬೇಕು ಎಂದು ಸಚಿವರು ತಿಳಿಸಿದರು. ಯಾವ ಇಲಾಖೆಗಳು ಎಷ್ಟು ಅನುದಾನ ವೆಚ್ಚ ಮಾಡಿವೆ, ನಿಗದಿತ ಗುರಿ ಸಾಧಿಸಿವೆಯೇ ಎಂಬುದನ್ನು ಜಿಲ್ಲಾಮಟ್ಟದ ಅಧಿಕಾರಿಗಳು ಪರಿಶೀಲಿಸಬೇಕು. ಈ ಕಾರ್ಯದಲ್ಲಿ ಲೋಪ ಕಂಡುಬಂದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಕಾರ್ಯವೈಖರಿಯನ್ನು ಗಂಭೀರವಾಗಿ ಪರಿಗಣಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.**

### ಸೌಲಭ್ಯ ವಂಚಿತ ಗ್ರಾಮಗಳಿಗೆ ಅಧಿಕಾರಿಗಳು ಭೇಟಿ ನೀಡಿ

**ಕೆಲವು ಗ್ರಾಮಗಳಲ್ಲಿ ಸಮುದಾಯದ ಜನರಿಗೆ ನಿವೇಶನ, ಮನೆ ಹಾಗೂ ಸ್ಮಶಾನಗಳ ಸೌಲಭ್ಯಗಳಿಲ್ಲ. ಅಂತಹ ಗ್ರಾಮಗಳಿಗೆ ಅಧಿಕಾರಿಗಳು ಖುದ್ದಾಗಿ ಭೇಟಿ ನೀಡಿ, ಅಗತ್ಯ ಸೌಲಭ್ಯಗಳನ್ನು ಒದಗಿಸಲು ಸಕ್ರಿಯವಾಗಿ ಕಾರ್ಯನಿರ್ವಹಿಸಬೇಕು ಎಂದು ಟಿ. ರಘುಮೂರ್ತಿ ನಿರ್ದೇಶನ ನೀಡಿದರು. ಜಿಲ್ಲೆಯ ಎಲ್ಲ 130 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಭಾರತ್ ಜೂಡೋ ಯುವಕ ಸಂಘಗಳ ನೋಂದಣಿ ಪ್ರಕ್ರಿಯೆಯನ್ನು ಚುರುಕುಗೊಳಿಸಬೇಕು. ಸಂಘಗಳ ನೋಂದಣಿಯಲ್ಲಿ ಪರಿಶಿಷ್ಟ ಪಂಗಡದ ಯುವಕ-ಯುವತಿಯರಿಗೆ ಆದ್ಯತೆ ನೀಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.**

### ಅಧಿಕಾರಿಗಳು ಸಭೆಯಲ್ಲಿ ಭಾಗಿ

ಸಭೆಯಲ್ಲಿ ಕಾವೇರಿ ಜಲಾನಯನ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಿ. ಮರಿಸ್ವಾಮಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಎಚ್.ವಿ. ಚಂದ್ರು, ಹೆಚ್ಚುವರಿ ಜಿಲ್ಲಾಧಿಕಾರಿ ಪ್ರಿಯದರ್ಶಿನಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಂ.ಎನ್. ಶಶಿಧರ್, ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಹೊನ್ನರಾಜು, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಮುನಿರಾಜು, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಚಂದ್ರಪಾಟೀಲ್, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕಿ ಪುಟ್ಟಗೌರಮ್ಮ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ರಾಜೇಶ್ಕುಮಾರ್, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಎಚ್.ಎಸ್. ಬಿಂದ್ಯಾ ಸೇರಿದಂತೆ ಜಿಲ್ಲಾಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

## ಕೇರಳ ಲಾಟರಿ ಮಾರಾಟ ಮಾಡುತ್ತಿದ್ದ ವ್ಯಕ್ತಿ ಬಂಧನ

**1.20 ಲಕ್ಷ ರೂ. ಮೌಲ್ಯದ ಟಿಕೆಟ್ ವಶ**

ಗುಂಡ್ಲುಪೇಟೆ: ಅಕ್ರಮವಾಗಿ ಕೇರಳ ಲಾಟರಿ ಟಿಕೆಟ್ ಗಳನ್ನು ಮಾರಾಟ ಮಾಡುತ್ತಿದ್ದ ವ್ಯಕ್ತಿಯೊಬ್ಬರನ್ನು ಬಂಧಿಸಿ, ಲಾಟರಿ ಟಿಕೆಟ್ ಗಳನ್ನು ವಶಕ್ಕೆ ಪಡೆದಿರುವ ಘಟನೆ ಗುಂಡ್ಲುಪೇಟೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಚಾಮರಾಜನಗರದ ನಿವಾಸಿ ಜುಬೇರ್ (55) ಬಂಧಿತ ಆರೋಪಿ. ಈತ ಪಟ್ಟಣದ ಹಳೇ ಬಸ್ ನಿಲ್ದಾಣದ ಬಳಿ ಇರುವ ನೆಹರೂ ಪಾರ್ಕ್ ಸಮೀಪದ ಸಾರ್ವಜನಿಕ ಸ್ಥಳದಲ್ಲಿ ಕೇರಳ ಲಾಟರಿ ಟಿಕೆಟ್ ಗಳನ್ನು ಮಾರಾಟ ಮಾಡುತ್ತಿರುವ ಖಚಿತ ಮಾಹಿತಿ ಮೇರೆಗೆ ಗುಂಡ್ಲುಪೇಟೆ ಪೊಲೀಸ್ ಠಾಣೆಯ ಪ್ರಭಾರ ಅರಕ್ಷಕ ನಿರೀಕ್ಷಕ ರಘು .ಕೆ ನೇತೃತ್ವದ ತಂಡ ದಾಳಿ ನಡೆಸಿ ಆರೋಪಿಯನ್ನು ಬಂಧಿಸಿ, ಆತನ ಬಳಿಯಿದ್ದ ಸುಮಾರು 1,20,000 ಮೌಲ್ಯದ 2400 ಲಾಟರಿ ಟಿಕೆಟ್ ಗಳನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ.

ಈ ಸಂಬಂಧ ಗುಂಡ್ಲುಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಕಾರ್ಯಾಚರಣೆಯಲ್ಲಿ ಠಾಣೆಯ ಸಿಬ್ಬಂದಿಗಳು ಭಾಗವಹಿಸಿದ್ದರು.

# ದಾದಾಸಾಹೇಬ್ ಕಾನ್ಶಿರಾಮ್ ಪುಣ್ಯಸ್ಮರಣೆ

ಚಾಮರಾಜನಗರ: ದಾದಾ ಸಾಹೇಬ್ ಕಾನ್ಶಿರಾಮ್ ರವರಿಂದ ಸಮಾಜದಲ್ಲಿ ಸಮಾನತೆಗೆ ತಳ ಸಮುದಾಯದವರು ಅಧಿಕಾರದ ಗದ್ದುಗೆ ಹಿಡಿಯಬೇಕು ಎಂಬ ಅಂಬೇಡ್ಕರ್ ಆಶಯ ಈಡೇರಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದರು ಎಂದು ಹೊಂಡರಬಾಳು ವಾಸು ಹೇಳಿದರು.



ನಗರದ ಪ್ರವಾಸಿಮಂದಿರದಲ್ಲಿ ದಾದಾಸಾಹೇಬ್ ಕಾನ್ಶಿರಾಮ್ ಅನುಯಾಯಿ ಬಳಗದ ವತಿಯಿಂದ ನಡೆದ ದಾದಾ ಸಾಹೇಬ್ ಕಾನ್ಶಿರಾಮ್ ರವರ 20ನೇ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಪುಷ್ಪಾರ್ಚನೆ ಮಾಡಿ ಮಾತನಾಡಿದರು. ದಾದಾ ಸಾಹೇಬ್ ಕಾನ್ಶಿರಾಮ್ ರವರು ಭಾರತದ ಸಾಮಾಜಿಕ ಮತ್ತು ರಾಜಕೀಯ ಇತಿಹಾಸದಲ್ಲಿ ದಲಿತರು, ಹಿಂದುಳಿದವರು, ಮತ್ತು ಅಲ್ಪಾಸಂಖ್ಯಾತರನ್ನು ರಾಜಕೀಯವಾಗಿ ಸಂಘಟಿಸಲು ಅವರು ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದರು ಎಂದರು. ಅವರೇ ಹೇಳುವ ಹಾಗೆ ದೊಡ್ಡ ಗುರಿ ಬಹು ದೊಡ್ಡ ತ್ಯಾಗವನ್ನು ಬಯಸುತ್ತದೆ ಎಂಬಂತೆ ತಮ್ಮ ಜೀವಿತಾವಧಿಯಲ್ಲಿ ಯಾವುದೇ ಸಣ್ಣ ಉಳಿತಾಯ ಖಾತೆ ಹೊಂದದೆ ಸ್ವಂತ ಮನೆಗೆ 20 ವರ್ಷಗಳ ಕಾಲ ಬಹುಜನ ಸಮಾಜವೇ ನನ್ನ ಮನೆ ಎಂದು ನಂಬಿ ಕನ್ಯಾಕುಮಾರಿಯಿಂದ ಕಾಶ್ಮೀರದ ವರೆಗೆ ಹಲವಾರು ಭಾರಿ ಸೈಕಲ್ ಜಾಥಾ ಮಾಡುವ ಮೂಲಕ

ಬಹುಜನರ ಕೈಗೆ ರಾಜಕೀಯ ಅಧಿಕಾರ ಸಿಗಬೇಕೆಂಬ ಉದ್ದೇಶದಿಂದ 1984 ಏ. 14ರಲ್ಲಿ ಬಹುಜನ ಸಮಾಜ ಪಕ್ಷ ಸ್ಥಾಪಿಸಿದರು. ಅವರು ಸ್ಥಾಪಿಸಿದ ಪಕ್ಷವನ್ನು ಜಿಲ್ಲೆಯಲ್ಲಿ ಸದೃಢಗೊಳಿಸಿ ಪ್ರಬುದ್ಧ ಭಾರತ ನಿರ್ಮಾಣ ಮಾಡಲು ನಾವೆಲ್ಲರೂ ಶ್ರಮಿಸೋಣ ಎಂದರು.

ಜಿಲ್ಲೆಯಲ್ಲಿ ಬಹುಜನ ಸಮಾಜ ಪಕ್ಷವನ್ನು ತಳ ಮಟ್ಟದಿಂದ ಸಂಘಟಿಸುವುದಾಗಿ ದೃಢ ನಿರ್ಧಾರ ಮಾಡಿ ಪ್ರತಿಜ್ಞೆ ಮಾಡಿದರು. ಕಾರ್ಯಕ್ರಮದಲ್ಲಿ ಎಸ್.ಪಿ.ಮಹೇಶ್, ರಾಮಸಮುದ್ರ ಬಾಬು, ಸಿದ್ದರಾಜು, ರಂಗಸ್ವಾಮಿ, ಗೋವಿಂದರಾಜು, ಶಿವಣ್ಣ ದೇವಲಾಪುರ,ರಮೇಶ್, ಕಾಂತರಾಜು ಅಮಚವಾಡಿ, ಮಧು ಹೊಂಡರಬಾಳು, ಕೃಷ್ಣ, ಸುನಿಲ್, ಸ್ವಾಮಿ, ಮಂಜು, ತೀರ್ಥ ಪ್ರಸಾದ್,ಮಹೇಶ್ ಇತರರು ಭಾಗವಹಿಸಿದ್ದರು.

**ಜಿಲ್ಲಾ ನ್ಯಾಯಾಲಯದಲ್ಲಿ ನಡೆದ ಕಾರ್ಯಕ್ರಮ**

# ಚಾ.ನಗರ: ವಿಶೇಷ ಆಯುಷ್ ಆರೋಗ್ಯ ಶಿಬಿರ

ಚಾಮರಾಜನಗರ,ಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ನ್ಯಾಯಾಂಗ ಇಲಾಖೆ, ಜಿಲ್ಲಾ ವಕೀಲರ ಸಂಘ, ಆಯುಷ್ ಇಲಾಖೆ ಸಹಯೋಗದಲ್ಲಿ ವಿಶೇಷ ಆಯುಷ್ ಆರೋಗ್ಯ ಶಿಬಿರವನ್ನು ನಗರದ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿರುವ ಎ.ಡಿ.ಆರ್ ಕಟ್ಟಡದಲ್ಲಿ ಇತ್ತೀಚೆಗೆ ಹಮ್ಮಿಕೊಳ್ಳಲಾಗಿತ್ತು.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಜಿ. ಪ್ರಭಾವತಿ ಅವರು ಕಾರ್ಯಕ್ರಮ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು ಇಂದಿನ ಒತ್ತಡದ ಬದುಕಿನಲ್ಲಿ ಹಾಗೂ ದೈನಂದಿನ ಕೆಲಸ ಕಾರ್ಯಗಳ ನಡುವೆ ದೈಹಿಕ ಹಾಗೂ ಮಾನಸಿಕ ಆರೋಗ್ಯಕ್ಕಾಗಿ ಪ್ರತಿಯೊಬ್ಬರೂ ಜಾಗರೂಕರಾಗಬೇಕು. ಲಭ್ಯವಿರುವ ಆರೋಗ್ಯ ಸೌಲಭ್ಯಗಳನ್ನು ಬಳಸಿಕೊಂಡು ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದು ತಿಳಿಸಿದರು.




ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಈಶ್ವರ್ ಅವರು ಮಾತನಾಡಿ ಆಯುಷ್ ಪದ್ಧತಿಯ ಸದುಪಯೋಗ ಪಡೆದುಕೊಂಡು ಆರೋಗ್ಯವನ್ನು ಕಾಪಾಡಿಕೊಳ್ಳುವಂತೆ ತಿಳಿಸಿ ಕಾರ್ಯಕ್ರಮಕ್ಕೆ ಶುಭಕೋರಿದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ಪುಟ್ಟಸ್ವಾಮಿ ರಾಮಸಮುದ್ರ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ ಇಂದಿನ ದಿನಗಳಲ್ಲಿ ನಾವು ಬಳಸುತ್ತಿರುವ ಆಹಾರ ಪದಾರ್ಥಗಳು ಕಲುಷಿತಗೊಂಡಿದ್ದು ಆರೋಗ್ಯ ಕಾಪಾಡಿಕೊಳ್ಳಲು ಆಯುಷ್ ಪದ್ಧತಿಯ ಅಗತ್ಯತೆ ಬಗ್ಗೆ ತಿಳಿಸಿದರು.

ಜಿಲ್ಲಾ ಆಯುಷ್ ಅಧಿಕಾರಿ ಡಾ. ಬಿ.ಪಿ. ಸತೀಶ್ ಕುಮಾರ್ ಅವರು ಆಯುಷ್ ಇಲಾಖೆಯ ವಿವಿಧ ಕಾರ್ಯಕ್ರಮಗಳು ಹಾಗೂ ಲಭ್ಯವಿರುವ ಚಿಕಿತ್ಸೆಗಳ ಬಗ್ಗೆ ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಡಾ. ರಂಜಿತಾ, ಡಾ. ಚೈತ್ರ, ಡಾ. ಕನ್ನಿಕಾ ಅವರು ಆಯುಷ್ ಪದ್ಧತಿಯ ಬಗ್ಗೆ ವಿವರಿಸಿದರು. ಆಯುರ್ವೇದ, ಹೋಮಿಯೋಪತಿ ಮತ್ತು ಯುನಾನಿ ಪದ್ಧತಿಗಳ ವೈದ್ಯಾಧಿಕಾರಿಗಳು ಹಾಜರಿದ್ದು ಶಿಬಿರಾರ್ಥಿಗಳ ವೈದ್ಯಕೀಯ ತಪಾಸಣೆ ನಡೆಸಿ ಔಷಧ ವಿತರಣೆ ಮಾಡಲಾಯಿತು.

ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಎಸ್.ಜೆ. ಕೃಷ್ಣ, ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡನಾಧಿಕಾರಿಗಳಾದ ಸಿ.ಡಿ ಪ್ರಕಾಶ್, ಜೆ.ಎಂ.ಎಫ್.ಸಿ ನ್ಯಾಯಾಲಯದ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರಾದ ಆರ್. ಸುನೀಲ್, ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಸ್ಮಿತಾ ನಾಗಲಾಪುರ್, ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ಪ್ರತಿಭಾ, ಜಿಲ್ಲಾ ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಎಂ. ಶಿವರಾಮು, ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ಮುಖ್ಯ ಆಡಳಿತಾಧಿಕಾರಿ ಜಿ.ಪಿ. ಸುರೇಶ್, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಯುವ ಸಂಸತ್ತು ಸಭೆಯ ಉದ್ಘಾಟನೆ ಅ.9ಕ್ಕೆ

**ಗುಂಡ್ಲುಪೇಟೆ:** ತಾಲೂಕು ಆಡಳಿತದ ವತಿಯಿಂದ ಸರ್ಕಾರದ ಆದೇಶದ ಹಿನ್ನೆಲೆಯಲ್ಲಿ ಯುವ ಸಂಸತ್ತು ಸಭೆಯ ಉದ್ಘಾಟನಾ ಕಾರ್ಯಕ್ರಮವನ್ನು ಅ.9ರಂದು ಬೆಳಿಗ್ಗೆ 10 ಗಂಟೆಗೆ ಪಟ್ಟಣದ ಗುರುಭವನದಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ಯುವ ಸಂಸತ್ತು ಸಭೆಗೆ ಚಾಲನೆ ನೀಡಲಾಗುವುದು. ಯುವಜನರಲ್ಲಿ ಸಂಸದೀಯ ವ್ಯವಸ್ಥೆ, ಪ್ರಜಾಪ್ರಭುತ್ವ ಹಾಗೂ ಆಡಳಿತದ ಕುರಿತು ಅರಿವು ಮೂಡಿಸುವ ಉದ್ದೇಶದಿಂದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮಕ್ಕೆ ಜನಪ್ರತಿನಿಧಿಗಳು, ವಿವಿಧ ಸಂಘ-ಸಂಸ್ಥೆಗಳ ಮುಖಂಡರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ತಾಲೂಕು ಆಡಳಿತ ಮನವಿ ಮಾಡಿದೆ.

## ಸ್ವಚ್ಛತೆ ನಮ್ಮಿಂದಲೇ ಆರಂಭವಾಗಲಿ: ಶರವಣ ಎಸ್.

### ನೀನು ಮೊದಲು ನಡೆ, ಆಮೇಲೆ ನನ್ನ ನಡೆ ಎಂಬ ಮನೋಭಾವ ಬಿಡಿ

**ಗುಂಡ್ಲುಪೇಟೆ:** ಸ್ವಚ್ಛತೆ ಕೇವಲ ಸರ್ಕಾರ ಅಥವಾ ಪುರಸಭೆಯ ಜವಾಬ್ದಾರಿಯಲ್ಲ, ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ. ನೀನು ಮೊದಲು ನಡೆ, ಆಮೇಲೆ ನನ್ನ ನಡೆ ಎಂಬ ಮನೋಭಾವ ಬಿಟ್ಟು, ನಮ್ಮಿಂದಲೇ ಸ್ವಚ್ಛತೆ ಆರಂಭಿಸಬೇಕು ಎಂದು ಪುರಸಭೆ ಮುಖ್ಯಾಧಿಕಾರಿ ಶರವಣ ಎಸ್. (ಕೆಎಂಎಎಸ್) ಕರೆ ನೀಡಿದರು.

ಪಟ್ಟಣದಲ್ಲಿ ಅ.2ರಿಂದ ನ.1ರವರೆಗೆ ನಡೆಯುತ್ತಿರುವ ಸ್ವಚ್ಛ ಸಂಕಲ್ಪ ಮಾಸ ಅಭಿಯಾನದ ಅಂಗವಾಗಿ ಮಾತನಾಡಿದ ಅವರು, ಸರ್ಕಾರ ಮತ್ತು ಪುರಸಭೆ ನಿರಂತರವಾಗಿ ಸ್ವಚ್ಛತೆ ಕುರಿತು ಜಾಗೃತಿ ಮೂಡಿಸುತ್ತಿದ್ದರೂ ಸಾರ್ವಜನಿಕರು ಜವಾಬ್ದಾರಿ ಅರಿಯದಿರುವುದು ವಿಷಾದನೀಯ ಎಂದರು.ಸ್ವಚ್ಛತೆಯ ನಡೆ, ಸ್ವಚ್ಛತೆಯ ಕಡೆ, ನೀನು ಮೊದಲು ನಡೆ, ಆಮೇಲೆ ನನ್ನ ನಡೆ ಎಂಬ ಮನೋಭಾವದಿಂದ ಆಗುತ್ತಿದೆ ಹಿನ್ನಡೆ;

ಪರಿಸರ ರಕ್ಷಣೆಯಲ್ಲಿ ಸಾರ್ವಜನಿಕರೇ ವಹಿಸಿ ಮುನ್ನಡೆ ಎಂದು ಕವನದ ಸಾಲುಗಳ ಮೂಲಕ ಜಾಗೃತಿ ಮೂಡಿಸಿದರು.

ಮನೆ ಹಾಗೂ ಅಂಗಡಿಗಳಲ್ಲಿ ಉತ್ಪತ್ತಿಯಾಗುವ ಕಸವನ್ನು ಹಸಿ ತ್ಯಾಜ್ಯ, ಒಣ ತ್ಯಾಜ್ಯ, ನೈರ್ಮಲ್ಯ ತ್ಯಾಜ್ಯ ಮತ್ತು ಅಪಾಯಕಾರಿ ತ್ಯಾಜ್ಯ ಎಂದು ನಾಲ್ಕು ವಿಧಗಳಾಗಿ ವಿಂಗಡಿಸಿ ಪುರಸಭೆಯ ವಾಹನಗಳಿಗೆ ನೀಡಬೇಕು. ರಸ್ತೆಬದಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಕಸ ಚೆಲ್ಲದೆ, ಗುಂಡ್ಲುಪೇಟೆಯನ್ನು ಸ್ವಚ್ಛ ಮತ್ತು ಸುಂದರ ಪಟ್ಟಣವನ್ನಾಗಿಸಲು ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದು ಮನವಿ ಮಾಡಿದರು.

## ತಾತ್ಕಲಿಕ ಆಯ್ಕೆಪಟ್ಟಿ ಪ್ರದರ್ಶನ

**ಮಂಡ್ಯ:** 2023 ನೇ ವರ್ಷದಲ್ಲಿ ಪ್ರಕಟಗೊಂಡು ರಾಜ್ಯಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಗಾಗಿ ಸ್ವೀಕರಿಸಿದ ಪುಸ್ತಕಗಳನ್ನು ಆಯ್ಕೆ ಸಮಿತಿಯು ಆಯ್ಕೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ್ದು, ಆಯ್ಕೆಯಾದ ಮತ್ತು ಆಯ್ಕೆಯಾಗದ ಪುಸ್ತಕಗಳ ಪ್ರದರ್ಶನವನ್ನು ಡಾ.ವಿಷ್ಣುವರ್ಧನ್ ಸ್ಮಾರಕ ಸ್ಪರ್ಧಾತ್ಮಕ ಪರೀಕ್ಷೆಗಳ ಅಧ್ಯಯನ ಕೇಂದ್ರ, ಎಂ.ಸಿ ಬಡಾವಣೆ (ಡಾ.ಬಾಲಗಂಗಾಧರನಾಥ ಸ್ವಾಮೀಜಿ ಮಲ್ಟಿ ಸ್ಪೇಷಾಲಿಟಿ ಆಸ್ಪತ್ರೆ ಹತ್ತಿರ) ವಿಜಯನಗರ ಬೆಂಗಳೂರು ಇಲ್ಲಿನ ಗ್ರಂಥಾಲಯ ಸಭಾಂಗಣದಲ್ಲಿ (ನೆಲಮಹಡಿ) ಅಕ್ಟೊಂಬರ್ 12 ರಿಂದ ಅಕ್ಟೋಬರ್ 14 ರವರೆಗೆ (ಬೆಳಿಗ್ಗೆ 10:00 ರಿಂದ ಸಂಜೆ 05:30) ಏರ್ಪಡಿಸಲಾಗುವುದು. ಆಯ್ಕೆಯಾದ ತಾತ್ಕಲಿಕ ಆಯ್ಕೆಪಟ್ಟಿಯನ್ನು ರಾಜ್ಯದ ಎಲ್ಲಾ ಜಿಲ್ಲಾ/ನಗರ ಕೇಂದ್ರ ಗ್ರಂಥಾಲಯಗಳ ಉಪನಿರ್ದೇಶಕರು/ ಮುಖ್ಯಗ್ರಂಥಾಲಯಾಧಿಕಾರಿಗಳ ಕಛೇರಿಗಳಲ್ಲಿ ಪ್ರದರ್ಶಿಸಲು ಸೂಕ್ತ ಕ್ರಮಕೈಗೊಳ್ಳಲಾಗುವುದು. ಹಾಗೂ ಇಲಾಖೆಯ ಅಧಿಕೃತ ವೆಬ್‌ಸೈಟ್ dpl.karnataka.gov.inನಲ್ಲಿಯೂ ಕೂಡ ಪ್ರಕಟಿಸಲಾಗುವುದು.

ಕಾರಣ ರಾಜ್ಯಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಗಾಗಿ ಸಲ್ಲಿಸಿದ ಲೇಖಕರು, ಲೇಖಕ ಪ್ರಕಾಶಕರು ಮತ್ತು ಪುಸ್ತಕ ಮಾರಾಟಗಾರರು ಆಕ್ಷೇಪಣೆಗಳಿದ್ದಲ್ಲಿ ಅಕ್ಟೋಬರ್ 12 ರಿಂದ ಅಕ್ಟೋಮಬರ್ 22 ರ ಸಂಜೆ 05:30 ರ ಒಳಗಾಗಿ ಆಯುಕ್ತರು ಸಾರ್ವಜನಿಕ ಗ್ರಂಥಾಲಯ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯಗೋಪುರ, ನಾಲ್ಕನೇ ಮಹಡಿ, ಡಾ. ಅಂಬೇಡ್ಕರ್ ವೀದಿ, ಬೆಂಗಳೂರು ಇಲ್ಲಿಗೆ ಲಿಖಿತವಾಗಿ ಮನವಿಗಳನ್ನು ಸಲ್ಲಿಸಲು ತಿಳಿಸಿದೆ. ಸಂಜೆ 05:30 ರ ನಂತರ ಬಂದ ಮನವಿಗಳನ್ನು ಯಾವುದೇಕಾರಣಕ್ಕು ಪರಿಗಣಿಸುವುದಿಲ್ಲ ಎಂದು ಮಂಡ್ಯ ನಗರ ಕೇಂದ್ರ ಗ್ರಂಥಾಲಯದ ಮುಖ್ಯ ಗ್ರಂಥಾಲಯಾಧಿಕಾರಿ(ಪ್ರ)ಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಂವಿಧಾನ ದತ್ತವಾಗಿ ಚುನಾವಣಾ ಆಯೋಗದಿಂದ ಎಸ್‌ಐಆರ್ ನಿರ್ವಹಣೆ : ಎನ್. ಮಹೇಶ್

**ಚಾಮರಾಜನಗರ:** ಕೇಂದ್ರ ಚುನಾವಣಾ ಆಯೋಗವು ಸಂವಿಧಾನ ದತ್ತವಾದ ಅಧಿಕಾರವನ್ನು ಬಳಸಿಕೊಂಡು ಉತ್ತಮವಾಗಿ ಕಾರ್ಯನಿರ್ವಹಣೆ ಮಾಡುತ್ತಿದ್ದು, ಎಸ್‌ಐಆರ್ ಪ್ರಕ್ರಿಯೆ ಪಾರದರ್ಶಕವಾಗಿ ನಡೆಯುತ್ತಿದೆ. ಇದನ್ನು ಸಹಿಸದ ಕಾಂಗ್ರೆಸ್ ದೇಶದ್ಯಂತ ಪಿತೂರಿ ಮಾಡುತ್ತಿದೆ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್. ಮಹೇಶ್ ವಾಗ್ದಾಳಿ ಮಾಡಿದರು.



ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆಯು 20 ವರ್ಷಗಳಿಗೊಮ್ಮೆ ಬರುತ್ತದೆ. ಇದು ಬಿಜೆಪಿ ಸರ್ಕಾರ ಬಂದ ನಂತರ ಬಂದಿದಲ್ಲ. ಜೊತೆಗೆ ಈ ಪ್ರಕ್ರಿಯೆಯನ್ನು ಚುನಾವಣಾ ಆಯೋಗ ಮಾಡುತ್ತಿದೆ. ಆದರೆ ಅಲ್ಲಿ ಕಾಂಗ್ರೆಸ್ ತನ್ನ ಮತದಾರರ್ನು ಉಳಿಸಿಕೊಳ್ಳಲು ಹೋರಾಟ ಮಾಡಬೇಕೆ ವಿನಯ ಬಿಜೆಪಿ ಅವರು ನಮ್ಮ ಮತಗಳನ್ನು ಅಕ್ರಮವಾಗಿ ತೆಗೆದು ಹಾಕುತ್ತಿದ್ದಾರೆ ಎಂದು ದೆಹಲಿಯಿಂದ ಕರ್ನಾಟಕದವರೆಗೆ ಹೋರಾಟ ಮಾಡುತ್ತಿರುವುದು ಹಾಸ್ಯಾಸ್ಪದವಾಗಿದೆ. ಹಾಗೂ ಸಂವಿಧಾನ ವಿರೋಧಿ ನಡೆಯಾಗಿದೆ ಎಂದು ದೂರಿದರು.

ಡಾ.ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ. ಒಬ್ಬರಿಗೆ ಒಂದೇ ಓಟು. ಇದನ್ನು ಜಾರಿ ಮಾಡಲು ಇಂತಹ ಎಸ್‌ಐಆರ್ ಪ್ರಕ್ರಿಯೆಗಳು ನಿರಂತರವಾಗಿ ನಡೆಯುತ್ತಿದೆ. ಕಾಂಗ್ರೆಸ್ ಪಕ್ಷದ ಕಾಲದಲ್ಲಿ ಇತ್ತು. ಆದರೆ, ಅವರು ಅಧಿಕಾರದಲ್ಲಿದ್ದಾಗ ಇದ್ಯಾವುದನ್ನು ಪ್ರಾಮಾಣಕವಾಗಿ ಮಾಡದ ಪರಿಣಾಮ ಅಧಿಕಾರ ಕಳೆದುಕೊಳ್ಳುವ ಸ್ಥಿತಿ ಬಂತು, ದೇಶ ವಾಸಿಗಳಲ್ಲದವರಿಗೆ ಮತದಾನ ಹಕ್ಕು ನೀಡುವ ಮೂಲಕ ದೇಶವನ್ನು ಸಂಕಷ್ಟಕ್ಕೆ ದೂಡಿದ್ದು ಕಾಂಗ್ರೆಸ್ ಎಂದು ದೂರಿದರು.

ಆದರೆ, ಈಗ ರಾಹುಲ್ ಗಾಂಧಿಯಿಂದ ಸಚಿವ ಪುಟ್ಟರಂಗಶೆಟ್ಟಿರ ವರೆಗೆ ಬಿಜೆಪಿ ಪಕ್ಷದ ಮೇಲೆ ಆರೋಪ ಮಾಡುತ್ತಾ ಕಾಲಹರಣ ಮಾಡುತ್ತಿದ್ದಾರೆ. ಯಾವುದೇ ಮತಗಟ್ಟೆಯಲ್ಲಿ ಹೆಸರು ಸೇರ್ಪಡೆ ಮಾಡಲು ಸೂಕ್ತ ದಾಖಲಾತಿಗಳನ್ನು ನೀಡಿ, ಸರಿಪಡಿಸಲು ಅವಕಾಶವನ್ನು ಆಯೋಗವೇ ನೀಡಿದೆ. ಇನ್ನು ಪ್ರತಿಭಟನೆ ಮಾಡುವ ಉದ್ದೇಶ ಏನು ಎಂದು ಪ್ರಶ್ನೆ ಮಾಡಿದರು.

ದೇಶದಲ್ಲಿರುವ 97 ಕೋಟಿ ಮತದಾರರಲ್ಲಿ 13 ಕೋಟಿ ಮತದಾರರನ್ನು ಅನರ್ಹ ಎಂದು ಗುರುತಿಸಲಾಗಿದೆ. ಕರ್ನಾಟಕದಲ್ಲಿ 18 ಕೋಟಿ ಮತದಾರರಲ್ಲಿ 5.37 ಲಕ್ಷ ಮತದಾರವನ್ನು ಅನರ್ಹರಾಗಿದ್ದಾರೆ. 13 ಕೋಟಿ ಅನರ್ಹ ಮತದಾರರನ್ನು ದೇಶದಲ್ಲಿರುವ 10.50 ಲಕ್ಷ ಬೂತ್ಗಳಿಗೆ ವಿಂಗಡನೆ ಮಾಡಿದರೆ, ಪ್ರತಿ ಬೂತ್ಗಳಿಗೆ ಸರಾಸರಿ 123 ಮತದಾರರು ಬರುತ್ತಾರೆ. ಆದೇ ರೀತಿ ರಾಜ್ಯಕ್ಕೆ ಹೋಲಿಕೆ ಮಾಡಿದರೆ, 58,282 ಬೂತ್ಗಳಿಗೆ 185 ಮತದಾರರು ಬರುತ್ತಾರೆ. ಅದನ್ನು ಯಾವ ಕಾರಣಕ್ಕೆ ಡಿಲಿಟ್ ಮಾಡಲಾಗಿದೆ ಎಂಬುದನ್ನು ಗಮನಿಸಿದರೆ ಪರಿಷ್ಕರಣೆ ವೇಳೆ ಅವರು ಇಲ್ಲದಿರುವುದು, ಬೇರೆ ಕಡೆಗೆ ಶಿಫ್ಟ್ ಆಗಿರುವುದು, ಮರಣ ಹೊಂದಿರುವುದು, ನಕಲಿ ಹಾಗು ಇತರೇ ಕಾರಣ ಕಂಡು ಬರುತ್ತದೆ. ಅದ್ದರಿಂದ ಇದನ್ನು ಪ್ರತಿಯೊಬ್ಬರು ತಿಳಿದುಕೊಳ್ಳಬೇಕು ಎಂದು ಮಹೇಶ್ ಸ್ಪಷ್ಟಪಡಿಸಿದರು.

ಸಚಿವ ಪುಟ್ಟರಂಗಶೆಟ್ಟಿ ಅವರು ಜಿಲ್ಲೆಯಲ್ಲಿ 88,277 ಮತದಾರರು ಡಿಲಿಟ್ ಆಗಿದೆ ಎಂದು ಹೇಳಿಕೆ ನೀಡಿದ್ದಾರೆ. ಅದನ್ನು 983 ಬೂತ್ಗಳಿಗೆ ವಿಂಗಡಣೆ ಮಾಡಿದರೆ ಪ್ರತಿ ಬೂತ್ಗೆ 49 ಮತದಾರರು ಬರಲಿದೆ. ಅಲ್ಲದೇ ಇದೇ ಶೆಟ್ಟರು ಸರಗೂರು ಮೋಳೆಯಲ್ಲಿ 40 ಮತದಾರರನ್ನು ತೆಗೆದುಹಾಕಲಾಗಿತ್ತು ಅವರನ್ನು ನಾವು ಮತ್ತೆ ಸೂಕ್ತ ದಾಖಲಾತಿಗಳನ್ನು ನೀಡಿ ಸೇರ್ಪಡೆ ಮಾಡಿದ್ದೇವೆ ಎಂದು ಹೇಳುವ ಸಚಿವರು ಉಳಿದವರನ್ನು ಸಹ ಅದೇ ರೀತಿ ಮಾಡಬೇಕಲ್ಲವೇ ಎಂದು ಮಹೇಶ್ ತಿರುಗೇಟು ನೀಡಿದರು.

ಬಿಎಲ್‌ಎ 1ಗಳೇ ಶಾಸಕರು ; ಸಭೆಗೆ ಮಾತ್ರ ಹೋಗಲ್ಲ: ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲಿ ಬಿಎಲ್‌ಎ 1ಗಳಾಗಿ ಶಾಸಕರನ್ನು ನೇಮಕ ಮಾಡಲಾಗಿದೆ. ಜೊತೆಗೆ ಯಾವುದೇ ಚುನಾವಣಾ ಪ್ರಕ್ರಿಯೆಗಳು ನಡೆಯಬೇಕಾದರೆ ಇವರಿಗೆ ಮಾಹಿತಿ ಹೋಗುತ್ತದೆ. ಇದುವರೆಗೆ ಬಿಎಲ್‌ಎ 1 ಆಗಿರುವ ಶಾಸಕರು ಡಿಸಿ ಅಧ್ಯಕ್ಷತೆಯಲ್ಲಿ ನಡೆಯುವ ಎಷ್ಟು ಸಭೆಗಳಿಗೆ ಹೋಗಿ ಸಲಹೆ ಸೂಚನೆ ನೀಡಿದ್ದಾರೆ. ಕೇವಲ ವಿರೋಧ ಮಾಡುವುದಕ್ಕೆ ಎಸ್‌ಐಆರ್ ವಿರುದ್ಧ ಗೂಬೆ ಕೂರಿಸುವ ಕೆಲಸ ಮಾಡುತ್ತಿದ್ದಾರೆ. ಬಿಜೆಪಿಯವರು ಷಡ್ಯಂತರ ಮಾಡುತ್ತಿದ್ದಾರೆ ಎಂದು ದೂರುತ್ತಿರುವ ಕಾಂಗ್ರೆಸ್ಸಿಗರು ಏಕೆ ಕೈಕಟ್ಟಿ ಕುಳಿತಿದ್ದಾರೆ. ಅವರು ಸಹ ಸೂಕ್ತ ದಾಖಲಾತಿಗಳನ್ನು ನೀಡಿ, ಸೇರ್ಪಡೆ ಮಾಡಿಸಲಿ ಎಂದು ನಿರಂಜನ್ಕುಮಾರ್ ಸವಾಲು ಹಾಕಿದರು.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ್ಕುಮಾರ್, ಕಾಡಾ ಮಾಜಿ ಅಧ್ಯಕ್ಷ ಜಿ. ನಿಜಗಣರಾಜು, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ್, ಮುಖಂಡರಾದ ರಾಮಚಂದ್ರ ನೂರೊಂದುಶೆಟ್ಟಿ, ಜಿಲ್ಲಾ ವಕ್ತಾರ ಮನೋಜ್ ಪಟೇಲ್, ಯುವ ಮೋರ್ಚಾ ಅಧ್ಯಕ್ಷ ಸೂರ್ಯಕುಮಾರ್ ಹಾಜರಿದ್ದರು.

## ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ 'ನಂದಿನಿ' ಆಧಾರ: ರಘು ಎಚ್.ಆರ್.

## 'ನಂದಿನಿ' 30 ಸಾವಿರ ಕೋಟಿ ವಹಿವಾಟಿನ ಬೃಹತ್ ಉದ್ಯಮ

**ಮಂಡ್ಯ:** ನಂದಿನಿ ಇಂದು 30 ಸಾವಿರ ಕೋಟಿ ರೂ. ವಹಿವಾಟಿನ ಬೃಹತ್ ಉದ್ಯಮವಾಗಿ ಬೆಳೆದಿದ್ದು, ಸುಮಾರು 40 ಲಕ್ಷ ರೈತರು ಈ ಸಹಕಾರ ಸಂಸ್ಥೆಯನ್ನು ನಂಬಿಕೊಂಡು ಬದುಕು ಕಟ್ಟಿಕೊಂಡಿದ್ದಾರೆ. ರೈತರು ಹಾಗೂ ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ನಂದಿನಿ ಪ್ರಮುಖ ಆಧಾರವಾಗಿದೆ ಎಂದು ಮಂಡ್ಯ ಹಾಲು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕ ರಘು ಎಚ್.ಆರ್. ತಿಳಿಸಿದರು.

ಮಂಡ್ಯ ನಗರದ ಸರ್ಕಾರಿ ಮಹಿಳಾ ಕಾಲೇಜಿನ ವನರಂಗದಲ್ಲಿ ಆಯೋಜಿಸಿದ್ದ 'ನಂದಿನಿ ಸುಗ್ಗಿ ಸಂಭ್ರಮ-2026' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶದಲ್ಲಿ ಅಮುಲ್ ನಂತರದ ಪ್ರಮುಖ ಸ್ಥಾನದಲ್ಲಿರುವ ನಂದಿನಿ ಬ್ರಾಂಡ್ ಮುಂದಿನ ದಿನಗಳಲ್ಲಿ ದೇಶದ ಅತ್ಯುನ್ನತ ಸಹಕಾರ ಸಂಸ್ಥೆಯಾಗಿ ಬೆಳೆಯಬೇಕು ಎಂಬುದು ಕನ್ನಡಿಗರ ಆಶಯವಾಗಿದೆ ಎಂದರು.

ಮಂಡ್ಯ ಜಿಲ್ಲೆಯ ಸಾವಯವ ಕಬ್ಬನ್ನು ಬಳಸಿ ತಯಾರಿಸಿದ ಬೆಲ್ಲದ ಸಿಹಿ ಉತ್ಪನ್ನಗಳನ್ನು ನಂದಿನಿ ಪರಿಚಯಿಸಿರುವುದು ಹೆಮ್ಮೆಯ ಸಂಗತಿ. ಸ್ಥಳೀಯ ಕೃಷಿ ಉತ್ಪನ್ನಗಳಿಗೆ ಮೌಲ್ಯವರ್ಧನೆ ಮಾಡುವ ಇಂತಹ ಪ್ರಯತ್ನಗಳು ರೈತರ ಆದಾಯ ಹೆಚ್ಚಿಸಲು ಸಹಕಾರಿಯಾಗಲಿವೆ ಎಂದು ಹೇಳಿದರು.

ಮಂಡ್ಯ ತಾಲೂಕಿನಲ್ಲಿ ಪ್ರತಿದಿನ ಸುಮಾರು ಮೂರು ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದ್ದು, ಅದು ನಂದಿನಿ ಡೇರಿಗೆ ಸೇರುತ್ತಿರುವುದು ಜಿಲ್ಲೆಯ ಹೆಮ್ಮೆಯ ಸಂಗತಿಯಾಗಿದೆ. ರೈತರು ತಮ್ಮ ಮನೆಗಳಲ್ಲಿರುವ ಹಸುಗಳಿಂದ ದೊರೆಯುವ ಹಾಲನ್ನು ಸಹಕಾರ ವ್ಯವಸ್ಥೆಯ ಮೂಲಕ ಮಾರಾಟ ಮಾಡುವುದರ ಜತೆಗೆ ಗ್ರಾಮೀಣ ಭಾಗದ ಅಭಿವೃದ್ಧಿಗೂ ಕೈಜೋಡಿಸಬೇಕು ಎಂದು ಕರೆ ನೀಡಿದರು.



ನಂದಿನಿ ರೈತರ ಆಸ್ತಿಯಾಗಿದ್ದು, ಸಹಕಾರ ತತ್ವದಡಿ ಇಷ್ಟೊಂದು ದೊಡ್ಡ ಮಟ್ಟದಲ್ಲಿ ಬೆಳೆದಿರುವುದು ರೈತರ ಬದುಕಿನಲ್ಲಿ ಹೊಸ ಅಭಿವೃದ್ಧಿಗೆ ಕಾರಣವಾಗಿದೆ. ದೇಶ ಅಭಿವೃದ್ಧಿಯಾದರೆ ರಾಜ್ಯ ಅಭಿವೃದ್ಧಿಯಾಗುತ್ತದೆ; ರಾಜ್ಯದ ಪ್ರಗತಿಯಿಂದ ತಾಲೂಕು, ತಾಲೂಕಿನ ಪ್ರಗತಿಯಿಂದ ಗ್ರಾಮ ಹಾಗೂ ಗ್ರಾಮದ ಅಭಿವೃದ್ಧಿಯಿಂದ ಮನೆಗಳು ಸುಭದ್ರವಾಗುತ್ತವೆ. ಹೀಗಾಗಿ ದೇಶದ ಅಭಿವೃದ್ಧಿಗೆ ಪ್ರತಿಯೊಬ್ಬರೂ ತಮ್ಮದೇ ಆದ ಕೊಡುಗೆ ನೀಡಬೇಕು ಎಂದು ತಿಳಿಸಿದರು.

ವಿದೇಶಗಳಲ್ಲಿ ಜನರು ಶಿಸ್ತು ಹಾಗೂ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡುತ್ತಾರೆ. ನಮ್ಮ ದೇಶದಲ್ಲಿಯೂ ಸಾರ್ವಜನಿಕರು ಇದೇ ರೀತಿಯ ಶಿಸ್ತನ್ನು ರೂಢಿಸಿಕೊಳ್ಳಬೇಕು. ಎಲ್ಲೆಂದರಲ್ಲಿ ಕಸ ಎಸೆಯುವುದರಿಂದ ಪರಿಸರದ ಸೌಂದರ್ಯಕ್ಕೆ ಧಕ್ಕೆಯಾಗುತ್ತದೆ. ಸ್ವಚ್ಛತೆ ಕಾಪಾಡುವುದು ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯಾಗಿದೆ ಎಂದರು.

## ಆರ್ಥಿಕ ಸಾಕ್ಷರತೆ, ಸೈಬರ್ ಅಪರಾಧ ತಡೆ ಕುರಿತು ಜಾಗೃತಿ ಕಾರ್ಯಕ್ರಮ

**ಗುಂಡ್ಲುಪೇಟೆ:** ಪಟ್ಟಣದ ಐಹೆಚ್ಡಿಯುಎ ಸಂಸ್ಥೆಯಲ್ಲಿ ಎಸ್ಬಿಐ ಗ್ರಾಮೀಣ ಅಭಿವೃದ್ಧಿ ಮತ್ತು ಕೌಶಲ್ಯ ತರಬೇತಿ ಸಂಸ್ಥೆ, ಮಾದಾಪುರ-ಚಾಮರಾಜನಗರ ವತಿಯಿಂದ ಆರ್ಥಿಕ ಸಾಕ್ಷರತಾ ಹಾಗೂ ತಂತ್ರಜ್ಞಾನ ಆಧಾರಿತ ಸೈಬರ್ ಅಪರಾಧಗಳಿಂದ ಸುರಕ್ಷತೆ ಕುರಿತು ಜಾಗೃತಿ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮಕ್ಕೆ ಎಸ್ಬಿಐ ಗ್ರಾಮೀಣ ಸಂಸ್ಥೆಯ ನಿರ್ದೇಶಕ ರಾಕೇಶ್ ಅಕುಲ ಚಾಲನೆ ನೀಡಿ ಮಾತನಾಡಿ, ವಿವಿಧ ನೈಜ ಘಟನೆಗಳ ಉದಾಹರಣೆಗಳ ಮೂಲಕ ಸೈಬರ್ ಅಪರಾಧಗಳಿಂದ ಸುರಕ್ಷತೆ ವಹಿಸುವ ಕುರಿತು ಅರಿವು ಮೂಡಿಸಿದರು.

ಧಾನ್ ಫೌಂಡೇಷನ್ ಸಂಸ್ಥೆಯ ಸಿಎಫ್ಐ ಸಂಯೋಜಕ ಗೋವಿಂದರಾಜು ಮಾತನಾಡಿ, ಬ್ಯಾಂಕ್ ವ್ಯವಹಾರಗಳು, ಹಣದ ಸುರಕ್ಷತಾ ಕ್ರಮಗಳು, ಸಾಮಾಜಿಕ ಭದ್ರತಾ ಯೋಜನೆಗಳು ಹಾಗೂ ತಂತ್ರಜ್ಞಾನ ಆಧಾರಿತ ಬ್ಯಾಂಕಿಂಗ್ ವ್ಯವಸ್ಥೆಯ ಅನುಕೂಲ*ಅನಾನುಕೂಲಗಳ ಕುರಿತು ಮಾಹಿತಿ ನೀಡಿದರು. ಜಿಡಿಎ ನರ್ಸಿಂಗ್ ತರಬೇತಿ ವಿದ್ಯಾರ್ಥಿಗಳು ಹಾಗೂ ಹೊಲಿಗೆ ತರಬೇತಿ ಪಡೆದವರಿಗೆ ಬ್ಯಾಂಕಿಂಗ್ ವ್ಯವಹಾರಗಳ ಬಗ್ಗೆ ಅರಿವು ಮೂಡಿಸಲಾಯಿತು.

ಐಹೆಚ್ಡಿಯುಎ ಸಂಸ್ಥೆಯ ಕೌಶಲ್ಯ ತರಬೇತಿ ನಿರ್ದೇಶಕ ನಾಗೇಂದ್ರ ಮಾತನಾಡಿ, ಇಂದಿನ ಡಿಜಿಟಲ್ ಯುಗದಲ್ಲಿ ಆರ್ಥಿಕ ಸಾಕ್ಷರತೆ ಹಾಗೂ ಸೈಬರ್ ಅಪರಾಧಗಳ ಕುರಿತು ಜ್ಞಾನ ವಿದ್ಯಾರ್ಥಿಗಳು ಸೇರಿದಂತೆ ಸಮಾಜದ ಪ್ರತಿಯೊಬ್ಬರಿಗೂ ಅಗತ್ಯವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಮೋಹನ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.



## ಮೈಸೂರು ದಸರಾ ಕವಿಗೋಷ್ಠಿಗೆ ಶಿಕ್ಷಕ ಗುರುಪ್ರಸಾದ್ ಕೊಡಗಾಪುರ ಆಯ್ಕೆ



**ಗುಂಡ್ಲುಪೇಟೆ:** ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಅಕ್ಟೋಬರ್ 13ರಂದು ನಡೆಯಲಿರುವ ಚುಟುಕು ಹಾಗೂ ಹಾಸ್ಯ ಕವಿಗೋಷ್ಠಿ?2026ಕ್ಕೆ ಗುಂಡ್ಲುಪೇಟೆ ಪಟ್ಟಣದ ದೊಡ್ಡಹುಂಡಿ ಭೋಗಪ್ಪ ಸರ್ಕಾರಿ ಪದವಿ ಪೂರ್ವ ಕಾಲೇಜಿನ (ಪ್ರೌಢಶಾಲಾ ವಿಭಾಗ) ಗಣಿತ ಶಿಕ್ಷಕ ಗುರುಪ್ರಸಾದ್ ಕೊಡಗಾಪುರ ಆಯ್ಕೆಯಾಗಿದ್ದಾರೆ.

ಮೈಸೂರಿನ ಮಾನಸಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಬಿ.ಎಂ.ಶ್ರೀ ಸಭಾಂಗಣದಲ್ಲಿ ಅ.13ರಂದು ಬೆಳಿಗ್ಗೆ 10.30ಕ್ಕೆ ಕವಿಗೋಷ್ಠಿ ನಡೆಯಲಿದ್ದು, ರಾಜ್ಯದ ವಿವಿಧ ಭಾಗಗಳಿಂದ ಆಯ್ಕೆಯಾಗಿರುವ ಕವಿಗಳು ತಮ್ಮ ಕವನಗಳನ್ನು ವಾಚಿಸಲಿದ್ದಾರೆ.

ಜಯಸುತ ಎಂಬ ಕಾವ್ಯನಾಮದಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿಕೊಂಡಿರುವ ಗುರುಪ್ರಸಾದ್ ಕೊಡಗಾಪುರ ಅವರು ಹಲವಾರು ಚುಟುಕುಗಳು ಹಾಗೂ ವಿವಿಧ ಸಾಹಿತ್ಯ ಕೃತಿಗಳ ರಚನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ರಂಗಭೂಮಿ ಸೇರಿದಂತೆ ಸಾಂಸ್ಕೃತಿಕ ಚಟುವಟಿಕೆಗಳಲ್ಲಿಯೂ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಅವರು, ಶಿಕ್ಷಕರಾಗಿ ಗಣಿತ ವಿಷಯವನ್ನು ಸರಳ ಹಾಗೂ ಪರಿಣಾಮಕಾರಿ ರೀತಿಯಲ್ಲಿ ಬೋಧಿಸುವ ಮೂಲಕ ವಿದ್ಯಾರ್ಥಿಗಳ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಮೈಸೂರು ದಸರಾ ಕವಿಗೋಷ್ಠಿಯಂತಹ ಪ್ರತಿಷ್ಠಿತ ವೇದಿಕೆಯಲ್ಲಿ ಕವನ ವಾಚಿಸುವ ಅವಕಾಶ ದೊರೆತಿರುವುದು ತಮ್ಮ ಸಾಹಿತ್ಯ ಪಯಣದ ಮಹತ್ವದ ಘಟ್ಟವಾಗಿದೆ ಎಂದು ಸಂತಸ ವ್ಯಕ್ತಪಡಿಸಿ, ಆಯ್ಕೆ ಸಮಿತಿಗೆ ಕೃತಜ್ಞತೆ ಸಲ್ಲಿಸಿದ್ದಾರೆ.

ಗುರುಪ್ರಸಾದ್ ಕೊಡಗಾಪುರ ಅವರ ಆಯ್ಕೆಗೆ ಸ್ಥಳೀಯ ಗ್ರಾಮಸ್ಥರು, ಬಿಇಒ ಸ್ವಾಮಿ, ಡಿ.ಬಿ.ಜಿ.ಜೆ.ಸಿ. ಪದವಿ ಪೂರ್ವ ಕಾಲೇಜಿನ ಉಪಪ್ರಾಂಶುಪಾಲ ಸಿದ್ದರಾಜು, ಸಹೋದ್ಯೋಗಿಗಳು, ಶಿಕ್ಷಕರ ಸಂಘದ ಪದಾಧಿಕಾರಿಗಳು, ತಾಲೂಕಿನ ಶಿಕ್ಷಕರು, ಸಾಹಿತ್ಯಾಸಕ್ತರು, ಸ್ನೇಹಿತರು ಹಾಗೂ ವಿದ್ಯಾರ್ಥಿಗಳು ಅಭಿನಂದನೆ ಸಲ್ಲಿಸಿದ್ದಾರೆ.

## ನವರಾತ್ರಿ ಸಂಭ್ರಮ



ಗಿರಿಜಾ.ಎಸ್. ದೇಶಪಾಂಡೆ. ಬೆಂಗಳೂರು.

ನವರಾತ್ರಿಯು ದೇವಿಯನ್ನು ಆರಾಧಿಸುವ ಹಿಂದೂಧರ್ಮದ ಹಬ್ಬ. ಇದನ್ನು ಕರ್ನಾಟಕದಲ್ಲಿ ದಸರ ಎಂದು ಕರೆಯುತ್ತಾರೆ. ಪಶ್ಚಿಮಬಂಗಾಲದಲ್ಲಿ ಈ ಹಬ್ಬವನ್ನು ದುರ್ಗಾಪೂಜೆ ಎಂದು ಆಚರಿಸಲಾಗುತ್ತದೆ. ನವರಾತ್ರಿಯ ನವ ಅಂದರೆ ಒಂಬತ್ತು ದಿನ ಒಂಬತ್ತು ವಿವಿಧ ದೇವತಾರೂಪವನ್ನು ಆರಾಧಿಸುತ್ತೇವೆ. ಹತ್ತನೇಯ ದಿನ ವಿಜಯದಶಮಿ ಆ ದಿನ ಶಮೀವೃಕ್ಷ ಅಥವಾ ಬನ್ನೀಮರಕ್ಕೆ ಪೂಜೆ ಸಲ್ಲಿಸಿ ಆ ಬನ್ನಿಯನ್ನು ದೇವರಿಗೆ ಅರ್ಪಿಸಿ ಹಿರಿಯರಿಗೆ ಆತ್ಮೀಯರಿಗೆ ನೀಡಿ ಹಿರಿಯರಿಗೆ ನಮಸ್ಕರಿಸಿ ಆಶೀರ್ವಾದ ಪಡೆದರೆ ಆತ್ಮೀಯರು,ಬಂಧು,ಬಳಗ,ಸ್ನೇಹಿತರಿಗೆ ನೀಡಿ ಬನ್ನಿ ತೊಗೊಂಡು ಬಂಗಾರದಂಗ ಕೊನೆಯವರೆಗೂ ಇರೋಣವೆಂದು ಕೇಳುತ್ತೇವೆ.ಬನ್ನಿ ಎಲೆಗಳು ಬಂಗಾರದ ಸಮಾನ ಎನ್ನುವ ವಾಡಿಕೆ ನಮ್ಮಲ್ಲಿದೆ. ಇನ್ನೂ ಕೆಲವರು ಬನ್ನಿ ವೃಕ್ಷದಲ್ಲಿ ಗಣೇಶನಿರುತ್ತಾನೆ ಎಂದು ಪೂಜಿಸುವ ಪದ್ಧತಿ ಇಟ್ಟುಕೊಂಡಿದ್ದಾರೆ. ಇದೇ ಹಬ್ಬದಂದು ಮೈಸೂರಿನಲ್ಲಿ ಆನೆಯ ಮೇಲೆ ಚಾಮುಂಡೇಶ್ವರಿ ಮೂರ್ತಿಯ ಮೆರವಣಿಗೆ ಮಾಡಲಾಗುತ್ತದೆ.ಈ ಮೈಸೂರು ದಸರಾ ಉತ್ಸವ ಜಗತ್ಪ್ರಸಿದ್ಧಿ ಪಡೆದಿದೆ. ಈ ಹಬ್ಬ ಆಶ್ವೀಜ ಮಾಸ ಪಾಡ್ಯದಿಂದ ದಶಮಿಯವರೆಗೆ ನಡೆಯುತ್ತದೆ.ಆಂದ್ರಪ್ರದೇಶ,ಮಹಾರಾಷ್ಟ್ರದಲ್ಲೂ ವಿಜ್ರಂಬಣೆಯಿಂದ ಆಚರಿಸುತ್ತಾರೆ.

ವೈಶಿಷ್ಟ್ಯ- ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ನವರಾತ್ರಿ ವಿಶೇಷವಾಗಿ ಆಚರಿಸಲಾಗುತ್ತದೆ. ಶಕ್ತಿಯ ಆರಾಧನೆ ಈ ಹಬ್ಬದ ವೈಶಿಷ್ಟ್ಯವಾಗಿದೆ. 9 ದಿನಗಳ ಕಾಲ ಆಚರಿಸಿ ವಿಜಯೋತ್ಸವವನ್ನು ಆಚರಿಸುವ ಈ ಹಬ್ಬವನ್ನು ನವರಾತ್ರಿ,ದುರ್ಗೋತ್ಸವ ಎಂದು ಕರೆಯಲಾಗುತ್ತದೆ. 9 ದಿನ ಆದಿಶಕ್ತಿಯನ್ನು ನವವಿಧದಲ್ಲಿ ಪೂಜಿಸಲಾಗುತ್ತದೆ.

1. ಪಾಡ್ಯದಂದು ಯೋಗನಿದ್ರಾ ದುರ್ಗಾಪೂಜೆ.
2. ಬಿದಿಗೆಯಂದು ದೇವಜಾತ ದುರ್ಗಾಪೂಜೆ.
3. ತದಿಗೆಯಂದು ಮಹಿಷಾಸುರ ಮರ್ಧಿನಿ ದುರ್ಗಾಪೂಜೆ.



4. ಚತುರ್ದಶಿ ಶೈಲಜಾತಾ ದುರ್ಗಾಪೂಜೆ.
5. ಪಂಚಮಿ- ದೂರ್ಮಹಾ ದುರ್ಗಾಪೂಜಾ.
6. ಶಷ್ಟಿ- ಚಂಡಮುಂಡ ಹಾ ದುರ್ಗಾಪೂಜಾ.
7. ಸಪ್ತಮಿ- ರಕ್ತಬೀಜ ದುರ್ಗಾಪೂಜಾ.
8. ಅಷ್ಟಮಿ- ದುರ್ಗಾಷ್ಟಮಿ
9. ಮಹಾನವಮಿ- ಶುಂಬ ಹಾ ದುರ್ಗಾಪೂಜಾ.

ಸಪ್ತಮಿಯಿಂದ ಮಹಾಕಾಳಿ,ಮಹಾಲಕ್ಷ್ಮಿ,ಮಹಾಸರಸ್ವತಿ ಪೂಜೆ ಮಾಡಲಾಗುತ್ತದೆ. ನವರಾತ್ರಿಯಲ್ಲಿ ಸಪ್ತಮಿಗೆ ವಿಶೇಷ ಸ್ಥಾನವಿದೆ. ಸಪ್ತಮಿಯ ಮೂಲಾನಕ್ಷತ್ರದಂದು ಪುಸ್ತಕ ಪವಿತ್ರಗ್ರಂಥಗಳನ್ನು ಚಿನ್ನ,ಬೆಳ್ಳಿ ಇಟ್ಟು ಪೂಜೆ ಮಾಡಲಾಗುತ್ತದೆ. ನವಮಿಯಂದು ಆಯುಧ ಪೂಜೆ,ದುರ್ಗಾಷ್ಟಮಿಯಂದು ದುರ್ಗೆಯ ಪೂಜೆ ಮಾಡಲಾಗುತ್ತದೆ.

ಪುರಾಣಗಳಲ್ಲಿ ನವರಾತ್ರಿ- ದುರ್ಗೆಯು ಮಹಿಷಾಸುರ ಮರ್ಧಿನಿಯಾಗಿ ಮಹಿಷಾಸುರನೆಂಬ ರಾಕ್ಷಸನನ್ನು ಸಂಹಾರ ಮಾಡಿದಳು. ನವರಾತ್ರಿ ಒಂಬತ್ತು ದಿನಕ್ಕೆ ಸೀಮಿತವಾಗಿದ್ದರೂ ಹತ್ತನೇಯ ದಿನ ದಶಮಿಯಂದು ಮಹಾದುರ್ಗೆ ರಾಕ್ಷಸರನ್ನು ಸಂಹರಿಸಿ ವಿಜಯ ಸಾಧಿಸಿದ ದಿನವೆಂದೂ,ಶ್ರೀರಾಮನು ರಾವಣನನ್ನು ಸಂಹಾರ ಮಾಡಿದ್ದು ವಿಜಯದಶಮಿಯೆಂದು ,ಪಾಂಡವರು ಅಜ್ಞಾತವಾಸದಲ್ಲಿ ತಮ್ಮ ಆಯುಧಗಳನ್ನು ಬನ್ನಿ ಮರದಲ್ಲಿ ಮುಚ್ಚಿಟ್ಟು ದಶಮಿಯ ದಿನ ಬನ್ನಿಗಿಡದಲ್ಲಿ ಇಟ್ಟ ಆಯುಧದೊಂದಿಗೆ ಕುರುಕ್ಷೇತ್ರ ಯುದ್ಧದಲ್ಲಿ ಕೌರವರ ವಿರುದ್ಧವಿಜಯ ಸಾಧಿಸಿದ್ದರು ಎಂದು ಹೇಳುತ್ತಾರೆ.ಹೀಗಾಗಿ ವಿಜಯವನ್ನು ಸಾಧಿಸಿದ ವಿಜಯದಶಮಿಯಂದು ಕರೆದು ಆಚರಿಸುವ ಪದ್ಧತಿ ರೂಢಿಯಲ್ಲಿದೆ.

ದಸರಾಶಬ್ದದ ಉತ್ಪತ್ತಿ- ದಸರಾ ಎನ್ನುವ ಶಬ್ದ ದಶಹರಾ ಎಂದೂ ಇದೆ. ದಸರಾದ ಮೊದಲ ಒಂಬತ್ತು ದಿನಗಳೂ ಎಲ್ಲ ದಿಕ್ಕುಗಳೂ ದೇವಿಯ ಶಕ್ತಿಯಿಂದ ಸಂಪನ್ನವಾಗಿರುತ್ತವೆ. ಎಲ್ಲ ದಿಕ್ಕುಗಳಿಂದಲೂ ವಿಜಯ ದೊರಕಿರುತ್ತದೆ.

ಆಯುಧ ಪೂಜೆ- ಮೊದಲು ರಾಜರು,ಸಾವಂತರು,ಸರದಾರರು ತಮ್ಮ ಶಸ್ತ್ರಗಳನ್ನು ಸ್ವಚ್ಛಗೊಳಿಸಿ ಸಂಭ್ರಮದಿಂದ ಪೂಜಿಸುತ್ತಿದ್ದರು. ಈಗ ರೈತಾಪಿ ಜನ,ಉಳಿದ ಜನ ತಾವು ಉಪಯೋಗಿಸುವ ವಾಹನಗಳು,ಮನೆಯಲ್ಲಿಯ ಗೃಹೋಪಯೋಗಿ ವಸ್ತುಗಳನ್ನು ಪೂಜಿಸುವ ಪದ್ಧತಿಯಲ್ಲದೇ ,ತಾವು ಕೆಲಸ ಮಾಡುವ ಕಾರ್ಯಾಲಯದಲ್ಲಿ ಅಲ್ಲಿಯ ವಸ್ತುಗಳನ್ನು ಪೂಜಿಸಿ ಆರಾಧಿಸುವ ವಾಡಿಕೆ ನಮ್ಮಲ್ಲಿ ಬೆಳೆದು ಬಂದಿದೆ.ನವರಾತ್ರಿಯ ಒಂಬತ್ತು ದಿನ ಶಕ್ತಿಯ ಉಪಾಸನೆ ಮಾಡಿ ದಶಮಿಯಂದು ವಿಜಯೋತ್ಸವ ಆಚರಿಸಬೇಕು.ಇದನ್ನೇ ದಸರಾ,ವಿಜಯದಶಮಿ,ನವರಾತ್ರಿ ಎಂದು ಕರೆಯುತ್ತಾರೆ.

ನವರಾತ್ರಿ ವೃತ ಆಚರಿಸುವ ಪದ್ಧತಿ- ಅಖಂಡ ಎಣ್ಣೆ,ತುಪ್ಪದ ದೀಪದ ಪ್ರಜ್ವಲನೆ,ಒಂಬತ್ತು ದಿನಗಳವರೆಗೆ ಸತತ ದೀಪ ಇಡುವದು,ದೇವಿ ಮಹಾತ್ಮೆ,ವೆಂಕಟೇಶ್ವರ ಮಹಾತ್ಮೆ ಸಪ್ತಶತಿಪಾಠ,ದೇವಿಭಾಗವತ,ಲಲಿತಾ ಪೂಜೆ,ಕುಂಕುಮಾರ್ಚನೆ,ಸರಸ್ವತಿಪೂಜೆ,ಅವರವರ ಶಕ್ತಾನುಸಾರ ನವರಾತ್ರಿ ಮಹೋತ್ಸವ ಆಚರಿಸುತ್ತಾರೆ.

ನವರಾತ್ರಿ ಆಚರಣೆಯ ಫಲ- ದೇವಿಯ ಉಪಾಸನೆ,ಶ್ರದ್ಧೆಯಿಂದ ಮಾಡಿದರೆ ದೇವಿತತ್ವದ ಲಾಭವಾಗುತ್ತದೆ. ನವರಾತ್ರಿಯ ಮೊದಲ ಮೂರು ದಿನಗಳಂದು ತಮೋಗುಣ ಕಡಿಮೆ ಮಾಡಲು ತಮೋಗುಣಿಯ ಮಹಾಕಾಳಿಯನ್ನು ನಂತರದ ಮೂರುದಿನಗಳಂದು ರಜೋಗುಣವನ್ನು ವೃದ್ಧಿಸಲು ಮಹಾಲಕ್ಷ್ಮಿಯ ಮತ್ತು ಕೊನೆಯ ಮೂರು ದಿನಗಳಂದು ಸಾಧನೆಯನ್ನು ತೀವ್ರಮಾಡಲು ಸತ್ವಗುಣಿ ಮಹಾಸರಸ್ವತಿಯ ಪೂಜೆ ಮಾಡುತ್ತಾರೆ.

ಎಲ್ಲ ದೇವಸ್ಥಾನಗಳಲ್ಲಿ ಒಂದೊಂದು ದಿನ ಒಂದು ಅಲಂಕಾರ ಮಾಡಿ ಪೂಜಿಸಲಾಗುತ್ತದೆ. ಈ ವರ್ಷವೂ ಸಂಭ್ರಮದಿಂದ ನವರಾತ್ರಿ ಆಚರಿಸಿ ಭಕ್ತಿಪೂರ್ವಕ ನಮಸ್ಕರಿಸಿ ಬನ್ನಿಯನ್ನು ವಿಜಯದಶಮಿಯಂದು ದೇವರಿಗೆ ಬಂಗಾರವೆಂದು ಅರ್ಪಿಸಿ ಹಿರಿಯರ,ಆತ್ಮೀಯರ ಆಶೀರ್ವಾದ ಬೇಡೋಣ. ನಾಡಿನ ಜನತೆಗೆ ನವರಾತ್ರಿಯ ಶುಭಾಶಯಗಳು.

# ಅವಳೊಳಗಿರುವ ನವಶಕ್ತಿ!

## ಅಡುಗೆಮನೆಯಿಂದ ಆಕಾಶದವರೆಗೆ ಸ್ತ್ರೀ ಎಂದರೆ ಶಕ್ತಿಯ ಒಂಬತ್ತು ರೂಪಗಳು!



| ರೂಪ ಮಂಜುನಾಥ ಹೊಳೆನರಸೀಪುರ

ನವರಾತ್ರಿ ಬಂದರೆ ಮನೆ-ಮನೆಗಳಲ್ಲಿ ಗೊಂಬೆ ಕೂರಿಸುತ್ತೇವೆ, ದೇವಿಯ ಆರಾಧನೆ ಮಾಡುತ್ತೇವೆ, ಒಂಬತ್ತು ದಿನಗಳ ಕಾಲ ನವದುರ್ಗೆಯರನ್ನು ಸ್ಮರಿಸುತ್ತೇವೆ. ಶೈಲಪುತ್ರಿಯಿಂದ ಸಿದ್ಧಿದಾತ್ರಿಯವರೆಗೆ ದೇವಿಯ ಒಂಬತ್ತು ರೂಪಗಳನ್ನು ಪೂಜಿಸುತ್ತೇವೆ.

ಆದರೆ ಒಂದು ಕ್ಷಣ ಯೋಚಿಸಿ ನೋಡಿ

ನಮ್ಮ ಮನೆಯಲ್ಲೇ ಪ್ರತಿದಿನ ಕಾಣಿಸುವ ಇನ್ನೊಂದು ನವಶಕ್ತಿ ಯನ್ನು ನಾವು ಎಷ್ಟು ಬಾರಿ ಗುರುತಿಸಿದ್ದೇವೆ

ಬೆಳಗ್ಗೆ ಎಲ್ಲರೂ ಏಳುವ ಮೊದಲೇ ಎದ್ದವಳು ಅವಳು.

ಯಾರಿಗೆ ಏನು ಅಡುಗೆ ಮಾಡಬೇಕು ಯಾರಿಗೆ ಏನು ಇಷ್ಟ ಯಾರಿಗೆ ಏನು ಬೇಡ ಎಂಬ ಲೆಕ್ಕ ಅವಳ ತಲೆಯಲ್ಲಿ ನಡೆಯುತ್ತಿರುತ್ತದೆ.

ಅಡುಗೆ ಮಾಡುತ್ತಾಳೆ, ಮಕ್ಕಳನ್ನು ನೋಡಿಕೊಳ್ಳುತ್ತಾಳೆ, ಹಿರಿಯರ ಔಷಧಿ ನೆನಪಿಸುತ್ತಾಳೆ, ಮನೆಯ ಖರ್ಚು ಹೊಂದಿಸುತ್ತಾಳೆ. ತನ್ನ ಕೆಲಸದ ಮಧ್ಯೆಯೇ ಗಂಡನ ಮುಖ ನೋಡಿದರೆ, ಇವತ್ತು ಯಾಕೋ ಇವರ ಮನಸ್ಸು ಸರಿ ಇಲ್ಲ. ಆಫೀಸಿನಲ್ಲಿ ಏನೋ ನೆಡೆದಿರಬೇಕು ಎಂದು ಅರಿತುಬಿಡುತ್ತಾಳೆ.

ಯಾವ ವಿಶ್ವವಿದ್ಯಾಲಯ ಅವಳಿಗೆ ಇದನ್ನೆಲ್ಲ ಕಲಿಸಿತು

ಇದೆಲ್ಲ ಅರ್ಥವಾಗುವಂಥ ಯಾವ ಪದವಿ ಅವಳು ಗಳಿಸಿದ್ದಾಳೇ

ಬಹುಶಃ ಯಾವುದೂ ಇಲ್ಲ.

ಆದರೆ ಅವಳ ಬದುಕೇ ಒಂದು ವಿಶ್ವವಿದ್ಯಾಲಯ.

ಅವಳ ಅಡುಗೆಮನೆಯೇ ಒಂದು ಪ್ರಯೋಗಾಲಯ.

ಅವಳ ಕುಟುಂಬವೇ ಒಂದು ಸಂಸ್ಥೆ.

ಅವಳ ದಿನಚರಿಯೇ ಒಂದು ನಿರ್ವಹಣಾ ಪಾಠ.

ಬೆಳಗ್ಗೆ ನಾಲ್ಕು ಜನರಿಗೆ ಸಾಕಾಗುವಷ್ಟು ಬೇಳೆ ಕುಕ್ಕರ್ ಗೆ ಹಾಕಿದ್ದಾಳೆ. ಅಷ್ಟರಲ್ಲಿ ಅತ್ತೆ-ಮಾವ ಬರುತ್ತಾರೆ ಎಂಬ ಸುದ್ದಿ!

ಇನ್ನೂ ಸ್ವಲ್ಪ ಹಾಕಿಬಿಡೋಣ

ಇದು ಕೇವಲ ಅಡುಗೆಯ ಅಂದಾಜಲ್ಲ. ಇದು ಆಜಟಚಿಟಜ ಈಠಡಿಜಛಿಭಿಣುಟರ!

ಒಂದು ಕಡೆ ಬೇಳೆ ಒಲೆಯ ಮೇಲೆ ಬೇಯುತ್ತಿದ್ದರೆ, ಇನ್ನೊಂದು ಕಡೆ ಅನ್ನ ಕುಕ್ಕರ್‌ನಲ್ಲಿ, ತವೆಯ ಮೇಲೆ ರೊಟ್ಟಿ, ಹಾಲು ಕಾಯುತ್ತಿದೆ. ಡಿಕಾಕ್ಷನ್ ಹಾಕಬೇಕು.ಅದೇ ಸಮಯದಲ್ಲಿ ನಾಳೆ ಏನು ಅಡುಗೆ ಮಾಡಬೇಕು ಎಂಬ ಯೋಚನೆ!

ಇದು ಒಣಟಣುಣಭಿಇುಟರ ಅಲ್ಲವೇ

ಎಣ್ಣೆ ಕಾದಿದೆಯೇ ಎಂದು ಅದರ ಸದ್ದಿನಿಂದಲೇ ಗುರುತಿಸುತ್ತಾಳೆ.

ಮೊಸರು ಸರಿಯಾಗಿ ಹೆಪ್ಪಾಗಿದೆಯೇ ಎಂದು ನೋಟದಲ್ಲೇ ಅರಿಯುತ್ತಾಳೆ.

ರೊಟ್ಟಿ ಉಬ್ಬುವ ಕ್ಷಣವನ್ನು ಕಣ್ಣಂಚಿನಿಂದಲೇ ಹಿಡಿದು ತಿರುವಿ ಹಾಕುತ್ತಾಳೆ.

ಇಡ್ಲಿ ಹಿಟ್ಟು ಒದಗಿ ಬಂದಿದೆಯಾ ಎಂದು ಪಾತ್ರೆ ನೋಡಿಯೇ ತಿಳಿಯುತ್ತಾಳೆ.

ಇದು ಗಣಿತವಲ್ಲವೇ

ಭೌತಶಾಸ್ತ್ರವಲ್ಲವೇ

ರಸಾಯನವಿಜ್ಞಾನವಲ್ಲವೇ



ಆದರೆ ಅವಳಿಗಾಗಿ ಯಾರೂ ಪರೀಕ್ಷೆ ನಡೆಸಲಿಲ್ಲ.

ಯಾರೂ ಅಂಕ ಕೊಡಲಿಲ್ಲ.

ಯಾರೂ ಪದವಿ ನೀಡಲಿಲ್ಲ.

ಸಂಬಳ ಮೊದಲೇ ಇಲ್ಲ.

ಆದರೂ ಆಕೆ ಕೆಲಸ ಕದಿಯೋಲ್ಲ. ಎಲ್ಲೂ ತನ್ನ ಸ್ವಾರ್ಥ ತೋರಿಸೋಲ್ಲ!

ಅವಳು ಕಲಿತದ್ದು ಕೇವಲ ಬದುಕಿನಿಂದ.

ಮನೆಯ ಮಾಸಿಕ ಬಜೆಟ್ ಕಡಿಮೆಯಾದರೂ, ತಿಂಗಳ ಕೊನೆಯ ವಾರದಲ್ಲೂ ಅಡುಗೆಮನೆಯ ಒಲೆ ಆರದಂತೆ ನೋಡಿಕೊಳ್ಳುವುದು ಅವಳದೇ ಅರ್ಥಶಾಸ್ತ್ರ.

ನಿನ್ನೆ ಉಳಿದ ರೊಟ್ಟಿ ಇಂದು ಹೊಸ ರೂಪ ಪಡೆಯುತ್ತದೆ. ಉಳಿದ ಅನ್ನ ಮತ್ತೊಂದು ದಿನ ಬೇರೆ ರುಚಿಯಲ್ಲಿ ತಟ್ಟೆಗೆ ಬರುತ್ತದೆ.

ಅವಳಿಗೆ Zero Waste Management ಎಂಬ ಪದ ಗೊತ್ತಿಲ್ಲದಿರಬಹುದು. ಆದರೆ ಉಳಿದದ್ದನ್ನು ವ್ಯರ್ಥ ಮಾಡದೆ, ಅದರಿಂದ ಹೊಸದನ್ನು ಸೃಷ್ಟಿಸುವ ಕಲೆ ಅವಳಿಗೆ ಗೊತ್ತು.

ಮಗುವಿಗೆ ಜ್ವರ ಬಂದರೆ ಹಗುರವಾದ ಆಹಾರ.

ಮಳೆಗಾಲದಲ್ಲಿ ಬಿಸಿಯಾದ ಸೂಪ್.

ಪರೀಕ್ಷೆಯ ದಿನಗಳಲ್ಲಿ ಮಗುವಿಗಾಗಿ ಇಷ್ಟದ ತಿಂಡಿ.

ಅವಳು ಓಣಣಡಿಣುಣಟಿ ಓದಿರದಿರಬಹುದು; ಆದರೆ ಮನೆಯ ಪ್ರತಿಯೊಬ್ಬರ ದೇಹಕ್ಕೆ ಯಾವಾಗ ಏನು ಬೇಕು ಎಂಬುದನ್ನು ತನ್ನ ಅನುಭವದಿಂದ ಅರಿತಿರುತ್ತಾಳೆ.

ಮನೆಯ ಯಾರಾದರೂ ಹಸಿವಿನಿಂದ ಮಲಗಿದರೆ ಅವಳಿಗೆ ನಿದ್ರೆ ಬರುವುದಿಲ್ಲ.

ಅವಳು ಕ್ಯಾಲೊರಿಗಳನ್ನು ಮಾತ್ರ ಎಣಿಸುವುದಿಲ್ಲ

ತಟ್ಟೆ ಖಾಲಿಯಾದ ನಂತರ ಮುಖದಲ್ಲಿ ಮೂಡುವ ತೃಪ್ತಿಯನ್ನು ಎಣಿಸುತ್ತಾಳೆ.ದೇಹದ ಆರೋಗ್ಯವನ್ನು ಗುಣಿಸುತ್ತಾಳೆ.

ಇವಳೇ ಸ್ತ್ರೀ.

ಆದರೆ ನವರಾತ್ರಿ ನಮಗೆ ಹೇಳುವುದು ಇಷ್ಟೇ ಅಲ್ಲ.

ಸ್ತ್ರೀ ಕೇವಲ ಪೋಷಿಸುವ ಶಕ್ತಿಯಲ್ಲ; ಅಗತ್ಯ ಬಂದಾಗ ಹೋರಾಡುವ ಶಕ್ತಿಯೂ ಹೌದು.

ಒಮ್ಮೆ ಅವಳು ಮಗಳಿಗಾಗಿ ಧೈರ್ಯವಾಗಿ ನಿಂತ ತಾಯಿ.

ಮತ್ತೊಮ್ಮೆ ತನ್ನ ಹಕ್ಕಿಗಾಗಿ ಧ್ವನಿ ಎತ್ತುವ ಮಹಿಳೆ.

ಇನ್ನೊಮ್ಮೆ ಕುಟುಂಬವನ್ನು ಸಂಕಷ್ಟದಿಂದ ಹೊರತರುವ ಆಪ್ತರಕ್ಷಕಿ.

ಮತ್ತೊಮ್ಮೆ ತನ್ನ ಕಾಲಿನ ಮೇಲೆ ನಿಂತು ತನ್ನದೇ ಬದುಕನ್ನು ಕಟ್ಟಿಕೊಳ್ಳುವ ಉದ್ಯಮಶೀಲಳು.

ಇಂದು ಅವಳು ವಿಜ್ಞಾನಿಯಾಗಿರಬಹುದು.

ವೈದ್ಯೆಯಾಗಿರಬಹುದು.

ಪೈಲಟ್ ಆಗಿರಬಹುದು.

ಕ್ರೀಡಾಪಟುವಾಗಿರಬಹುದು.

ಶಿಕ್ಷಕಿಯಾಗಿರಬಹುದು.

ಕಲಾವಿದೆಯಾಗಿರಬಹುದು.

ಉದ್ಯಮಿಯಾಗಿರಬಹುದು.

ರಾಜಕಾರಣಿಯಾಗಿರಬಹುದು.

ಅಥವಾ

ಯಾವ ಪದವಿಯೂ ಇಲ್ಲದೆ, ಬೆಳಗ್ಗಿನಿಂದ ರಾತ್ರಿಯವರೆಗೆ ಮನೆಯ ಪ್ರತಿಯೊಂದು ಜೀವದ ಹೊಟ್ಟೆ, ಆರೋಗ್ಯ, ಸಂತೋಷ ಮತ್ತು ನೆಮ್ಮದಿಯನ್ನು ನೋಡಿಕೊಳ್ಳುವ ಮನೆಯ ಅಇಔ ಆಗಿರಬಹುದು!

ನವರಾತ್ರಿಯ ಒಂಬತ್ತು ದಿನಗಳನ್ನು ಸ್ತ್ರೀಯ ಬದುಕಿನ ಒಂಬತ್ತು ಶಕ್ತಿಗಳೊಂದಿಗೆ ಹೋಲಿಸಿದರೆ, ಪ್ರತಿಯೊಂದು ರೂಪವೂ ನಮ್ಮ ಸುತ್ತಲಿನ ಯಾವುದೋ ಒಬ್ಬ ಮಹಿಳೆಯಲ್ಲಿ ಕಾಣಿಸುತ್ತದೆ.

ಶೈಲಪುತ್ರಿಯಂತೆ ಸಂಕಲ್ಪ.

ಎಷ್ಟೇ ಕಷ್ಟ ಬಂದರೂ ನಾನು ಮಾಡುತ್ತೇನೆ ಎನ್ನುವ ಶಕ್ತಿ.

ಬ್ರಹ್ಮಚಾರಿಣಿಯಂತೆ ತಪಸ್ಸು.

ಗುರಿಗಾಗಿ ವರ್ಷಗಳ ಕಾಲ ಪರಿಶ್ರಮಿಸುವ ತಾಳ್ಮೆ.

ಚಂದ್ರಘಂಟೆಯಂತೆ ಧೈರ್ಯ.

ಅನ್ಯಾಯ ಎದುರಾದಾಗ ಮೌನವಾಗಿರದೆ ಧ್ವನಿ ಎತ್ತುವ ಶಕ್ತಿ.

ಕೂಷ್ಮಾಂಡೆಯಂತೆ ಸೃಷ್ಟಿಶಕ್ತಿ.

ಶೂನ್ಯದಿಂದಲೂ ಹೊಸ ಬದುಕನ್ನು ಕಟ್ಟುವ ಸಾಮರ್ಥ್ಯ.

ಸ್ಕಂದಮಾತೆಯಂತೆ ಪೋಷಣೆ.

ತನಗಿಂತ ತನ್ನವರ ಒಳಿತನ್ನು ಮೊದಲು ನೋಡುವ ಹೃದಯ.

ಕಾತ್ಯಾಯನಿಯಂತೆ ಹೋರಾಟ.

ತನ್ನ ಹಕ್ಕು, ತನ್ನ ಕುಟುಂಬ, ತನ್ನ ಸಮಾಜಕ್ಕಾಗಿ ಎದುರಿಸುವ




ಧೈರ್ಯ.

ಕಾಳರಾತ್ರಿಯಂತೆ ಅಚಲತೆ.

ಬದುಕು ಕತ್ತಲಾದರೂ ದಾರಿ ಹುಡುಕುವ ಮನೋಬಲ.

ಮಹಾಗೌರಿಯಂತೆ ಕರುಣೆ.

ತಾನು ನೋವಿನಲ್ಲಿದ್ದರೂ ಇನ್ನೊಬ್ಬರ ನೋವನ್ನು ಅರ್ಥಮಾಡಿಕೊಳ್ಳುವ ಹೃದಯ.

ಸಿದ್ಧಿದಾತ್ರಿಯಂತೆ ಸಾಧನೆ. ತನ್ನ ಸಾಮರ್ಥ್ಯವನ್ನು ಅರಿತು, ತನ್ನದೇ ವ್ಯಾಪ್ತಿಯನ್ನು ನಿರ್ಮಿಸಿಕೊಳ್ಳುವ ಶಕ್ತಿ.

ಹಾಗಾದರೆ ನವಶಕ್ತಿ ಎಂದರೆ ದೇವಾಲಯದ ಮೂರ್ತಿಯಲ್ಲಷ್ಟೇ ಇದೆಯೇ ಇಲ್ಲ.

ಅದು ಬೆಳಗ್ಗೆ ಮನೆಯ ಅಡುಗೆಮನೆಯಲ್ಲಿ ಹೊತ್ತಿಕೊಳ್ಳುವ ಒಲೆಯ ಜ್ವಾಲೆಯಲ್ಲಿದೆ.

ಮಗುವಿನ ಕೈ ಹಿಡಿದು ಶಾಲೆಗೆ ಕರೆದೊಯ್ಯುವ ತಾಯಿಯ ಹೆಜ್ಜೆಯಲ್ಲಿದೆ.

ಕಚೇರಿಗೆ ಹೊರಡುವ ಮಹಿಳೆಯ ಆತ್ಮವಿಶ್ವಾಸದಲ್ಲಿದೆ.

ರಾತ್ರಿ ಎಲ್ಲರೂ ಮಲಗಿದ ಮೇಲೆ ಇನ್ನೂ ಕೆಲಸ ಮಾಡುತ್ತಿರುವ ಗೃಹಿಣಿಯ ಮೌನ ಪರಿಶ್ರಮದಲ್ಲಿದೆ.

ತನ್ನ ಕನಸನ್ನು ಬೆನ್ನಟ್ಟುವ ಯುವತಿಯ ಕಣ್ಣಲ್ಲಿದೆ.

ಕುಟುಂಬದ ಕಷ್ಟದ ಸಮಯದಲ್ಲಿ ಹೆದರಬೇಡಿ, ನಾನು ಇದ್ದೇನೆ ಎನ್ನುವ ಹೆಣ್ಣಿನ ಧ್ವನಿಯಲ್ಲಿದೆ.

ನವರಾತ್ರಿಯಲ್ಲಿ ನಾವು ದೇವಿಗೆ ದೀಪ ಹಚ್ಚುತ್ತೇವೆ. ಆದರೆ ಆ ಬೆಳಕನ್ನು ನಮ್ಮ ಮನೆಯ ಸ್ತ್ರೀಯ ಬದುಕಿನಲ್ಲೂ ಹಚ್ಚಲು ಕಲಿಯಬೇಕಲ್ಲವೇ

ಅವಳಿಗೆ ದೊಡ್ಡ ಉಡುಗೊರೆ ಬೇಕಾಗಿಲ್ಲ.

ಅಡುಗೆ ಮಾಡಿದ ಮೇಲೆ ಒಂದು ತುಂಬಾ ಚೆನ್ನಾಗಿದೆ ಎಂಬ ಮಾತೇ ಅವಳಿಗೆ ಸಾಕಾಗಬಹುದು.

ಊಟ ಮುಗಿದ ಮೇಲೆ ತನ್ನ ತಟ್ಟೆಯನ್ನು ತಾನೇ ತೆಗೆದುಕೊಂಡು ಹೋಗುವುದು ಸಾಕಾಗಬಹುದು.

ಅವಳು ದಿನವಿಡೀ ದುಡಿದ ನಂತರ, ಇವತ್ತು ನೀನು ಸ್ವಲ್ಪ ವಿಶ್ರಾಂತಿ ತೆಗೆದುಕೋ ಎಂದು ಹೇಳುವುದು ಸಾಕಾಗಬಹುದು.

ಏಕೆಂದರೆ ಕಚೇರಿಯಲ್ಲಿ ಒಂಬತ್ತು ಗಂಟೆಯ ನಂತರ ಕೆಲಸ ಮಾಡಿದರೆ Overtime ಎಂದು ಕರೆಯುತ್ತೇವೆ.

ಮನೆಯ ಕೆಲಸಕ್ಕೆ ಸಮಯದ ಗಡಿಯೇ ಇಲ್ಲ.

ಮಗು ರಾತ್ರಿ ಹನ್ನೊಂದು ಗಂಟೆಗೆ ಹಸಿದರೆ, ಅಡುಗೆಮನೆಯ ಮತ್ತೊಂದು ಪಾಳಿ ಆರಂಭವಾಗುತ್ತದೆ.

ಅವಳಿಗೇನೂ ಸಂಬಳದ ಚೀಟಿ ಬರುವುದಿಲ್ಲ.

ಆದರೆ ಅವಳು ಕೆಲಸ ನಿಲ್ಲಿಸುವುದಿಲ್ಲ.

ಅವಳಿಗೆ ಬೇಕಾಗಿರುವುದು ಬಹುಶಃ ಒಂದು ಚಿಕ್ಕ ಧನ್ಯವಾದ

ಹೀಗಾಗಿ ಈ ನವರಾತ್ರಿಯಲ್ಲಿ ದೇವಿಯ ಒಂಬತ್ತು ರೂಪಗಳನ್ನು ಪೂಜಿಸುವಾಗ, ನಮ್ಮ ಸುತ್ತಲಿರುವ ಸ್ತ್ರೀಯ ಒಂಭತ್ತು ಶಕ್ತಿಗಳನ್ನೂ ಗುರುತಿಸೋಣ.

ಅವಳು ಕೇವಲ ತಾಯಿ ಅಲ್ಲ.

ಅವಳು ಕೇವಲ ಪತ್ನಿ ಅಲ್ಲ.

ಅವಳು ಕೇವಲ ಗೃಹಿಣಿ ಅಲ್ಲ.

ಅವಳು ಸೃಷ್ಟಿ.

ಅವಳು ಸಹನೆ.

ಅವಳು ಧೈರ್ಯ.

ಅವಳು ಕರುಣೆ.

ಅವಳು ಹೋರಾಟ.

ಅವಳು ನಿರ್ವಹಣೆ.

ಅವಳು ಪ್ರೇರಣೆ.

ಅವಳು ಸಾಧನೆ.

ಅವಳು ನವಶಕ್ತಿ!

ಆದ್ದರಿಂದ ಈ ನವರಾತ್ರಿಯಲ್ಲಿ ದೇವಿಗೆ ನಮಸ್ಕರಿಸುವಾಗ, ಮನೆಯಲ್ಲಿರುವ ಆ ಅವಳಿಗೂ ಒಂದು ಧನ್ಯವಾದ ಹೇಳೋಣ.

ಬಹುಶಃ ಅವಳ ಕೈಯಲ್ಲಿರುವ ಪದವಿಯ ಪತ್ರ ಕಾಣಿಸದೇ ಇರಬಹುದು

ಆದರೆ ಅವಳ ಬದುಕಿನ ಪ್ರತಿಯೊಂದು ಪುಟದಲ್ಲೂ ಒಂದು ಪದ ಮಾತ್ರ ಸ್ಪಷ್ಟವಾಗಿ ಬರೆಯಲಾಗಿದೆ

ಶಕ್ತಿ.

ಮತ್ತು ಆ ಶಕ್ತಿಗೆ ನವರಾತ್ರಿ ಮಾತ್ರವಲ್ಲ

ಪ್ರತಿದಿನವೂ ಹಬ್ಬವಾಗಿರಲಿ! ಅದಕ್ಕೆ ಕಾರಣ ನೀವು ಎನ್ನುವ ಹೆಮ್ಮೆ ನಿಮಗಿರಲಿ!

ಯಾಕೆಂದರೆ, ಯತ್ರ ನಾರ್ಯಂತು ಪೂಜ್ಯಂತೇ ರಮಂತೇ ತತ್ರ ದೇವತಾಃ .

ಸರ್ವರಿಗೂ ನಮ್ಮ ನಾಡಹಬ್ಬ ನವರಾತ್ರಿಯ ಶುಭಾಶಯಗಳು!

---

# ಮಹತಿಸನ್ನಿಧಿ ಜ್ಯೋತಿ

## ಮುದ್ದುರಾಮನ ಅರಿವು ಭಾಗ- ೩



ಡಾ. ಪ್ರದೀಪಕುಮಾರ ಹೆಬ್ರಿ
98440 18457

**ಬಾಂದಳದ ಹರವಿನಲಿ ಮಿಗುಗಿದರೆ ನಕ್ಷತ್ರ.**
**ಸಾಗರದ ತೆರೆ ಮೇಲೆ ಸಾಗಿದರೆ ನಾವೆ.**
**ಕಾಣದವನಿಹನಲ್ಲಿ; ಮನುಜ ನಾವಿಕನಿಲ್ಲಿ;**
**ಗೊಂಬೆ ಆಡಿಸಿದಂತೆ- ಮುದ್ದುರಾಮ**

ಶ್ರೀರಾಮ, ಶ್ರೀಕೃಷ್ಣ ರವರನ್ನು ಅರಿಯದಿರುವವರು ಯಾರೂ ಇಲ್ಲ. ಇವರ ನೆನಪು ಹಾಗೂ ಇವರಲ್ಲಿ ತೋರುವ ಪ್ರೀತಿಯೇ ಅಂತರ್ಜ್ಯೋತಿಯ ಬೆಳಗಿ ದಾರಿ ತೋರುತ್ತದೆ. ಆಗ ಹರಿದು ಬೆಳಕಿನ ಕಿರಣ ಕತ್ತಲೆನುವುದೆ ಇಲ್ಲ ಎಂದರಿವಾಗಿ ಭಗವಂತನ ಲೀಲಾವಿಲಾಸದರಿವಾಗುತ್ತದೆ. ಇದು ನಮ್ಮೆದುರ ಬೋಳುಮರ ಚಿಗುರುವಿಕೆ, ಹೂವಿನ ಅರಳುವಿಕೆ, ಬರಿದಾದ ಎದೆಯಲ್ಲಿ ಪ್ರೀತಿಯ ಕೊನರುವಿಕೆಯಿಂದ ಮುಗುಳುನಗೆಯರಳಿ ಮನ ಗುನುಗುತ್ತದೆ,ಅವನೊಲುಮೆ ಮಳೆ ಸುರಿಯೆ ಬಾಳಕೆರೆ ಸುಂದರ ಎಂದು. ನಮಗೆ ದೇವಕೃಪೆಯಿದ್ದಾಗ ಮಾತ್ರ ಬಾಳು ಸೊಗಸಿನ ಬೀಡು ಎಂದೆನಿಸಿ ಬಾನಾಗಿ ಬೆಳಕಾಗಿ, ಹೂವಾಗಿ ಕಂಪಾಗಿ, ಕಡಲಾಗಿ ಅಲೆಯಾಗಿ ದೇವನಿಹನಲ್ಲಿ ಅರಿವು ಮೂಡುತ್ತದೆ. ಆಗ ಎದೆಬಡಿತದ ದನಿಯೇ ದೇವನಿಹನೆಲ್ಲೆಲ್ಲು ಎಂಬುದೇ ಆಗಿದೆ.



ಕೆ.ಸಿ.ಶಿವಪ್ಪ

ಪರಮಸತ್ಯ ಪರಮಾತ್ಮನ ಮೇಲೆ ನಮ್ಮ ಹೃದ್ಗತ ಭಾವನೆಯು ದೇವಗಂಗೆಯಾಗಿ ಪ್ರವಹಿಸಿದರದು ಪಾವನವಾಗುತ್ತದೆ. ಪರಿಶುದ್ಧವೆನಿಸುತ್ತದೆ. ಇದರಿಂದಲೇ ನಿಜಾನಂದ. ನಮಗನಿಸುವುದಾಗ ದೈವಕೊಡುಗೆ ಅನನ್ಯ ಎಂದು. ನಾವು ಬದುಕ ನಿಜಸತ್ಯವನ್ನರಿತವರಾಗಿರಬೇಕು. ನಾವು ತಿಳಿದ ಬಳ್ಳಿಗಂಟಿದ ಹೂವು ಕಳಚಿ ಬೀಳುವುದೊಮ್ಮೆ ಎಂಬ ನಿಜಸತ್ಯ ನಮ್ಮ ಅಂತರಂಗದ ಸುವಿಶಾಲ ಹಾಗೂ ನಿರ್ಮಲದ ಭಾವವೆನಿಸಿದರೆ ನಿಶ್ಚಿತವಾಗಿ ಅಂಜನದ ರೂಪದಲಿ ಕಣ್ಗೆ ನವನಿಧಿ ಕಾಣ್ಕೆ. ಇದೇ ದೇವಕೃಪೆ.

ಭಗವಂತನ ದಯೆ ಇರುವತನಕ ನಮ್ಮ ಬುದ್ಧಿ ಜಾಗೃತವಿದ್ದು ಬಾಳಿನ ಭಾರ ಹಗುರವಾಗಿಯೇ ಗೋಚರಿಸುತ್ರದೆ. ಮನಸ್ಸಿಗೆ ಹೊಳೆದದ್ದು ಪದವಾಗಿ ಅದುವೆ ಈಶ್ವರಪಂಕ್ತಿ ಎನಿಸುತ್ತದೆ. ನಾವು ನಿತ್ಯನಿಜದರಿವ ಜೀವಿಗಳಾಗಬೇಕಾದರೆ ಗುರುಚರಣ ಸ್ವಪದವಾಗಿ, ಭಯಭಕ್ತಿಸೇವೆಯಲಿ/ ಇದೆ ವಿದ್ಯೆ ಸಂಪ್ರಾಪ್ತಿ, ವಿನಯ ಸಂಸ್ಕಾರ. ಗುರುಶಿಷ್ಯ ಸಂಬಂಧ ನದಿಕಡಲ ಅನುಬಂಧ ಎಂದಾಗಿ ದೇವರನ್ನು ಒಲಿಸಿಕೊಳ್ಳುವಲ್ಲಿ ನಿತ್ಯ ನಿರಂತರ ಕ್ರಿಯಾಶೀಲರಾಗಿರಬೇಕು. ಆದರೆ ಗಮನದಲ್ಲಿರಬೇಕಾದುದು ದೇವರೊಲಿಯುವುದು ಹೊರಕಣ್ಣಿನ ಭಕ್ತಿ ಪ್ರದರ್ಶನದಿಂದಲ್ಲ, ಅಂತರಂಗದಾವಾಹನೆಯಿಂದ. ದೇವರರಿಯದಿರುವುದು




ಯಾವುದೂ ಇಲ್ಲ. ಹಾಗಾಗಿ ತೋರಿಕೆಯ ಭಕ್ತಿಯಿಂದ ಪಡೆಯುವುದೇನೂ ಇಲ್ಲ.

ಈ ಬದುಕಿನಲ್ಲಿ ' ನನ್ನದು ' ಎನ್ನುವುದೇನೇನೂ ಇಲ್ಲ. ಎಲ್ಲವೂ ಭಗವಂತನದ್ದೇ. ಕವಿನುಡಿಯಿದು:- ತುಟಿ ತೆರೆದು ಹಾಡುತಿಹೆ; ಆ ನಾದ ನಿನದಲ್ಲ/ಕಣ್ತೆರೆದು ಕಾಣುತಿಹೆ; ದೃಶ್ಯ ನಿನದಲ್ಲ/ನಿನ್ನದಿನ್ನೇನಯ್ಯ ಹೌದು. ನನ್ನದು ಎಂಬುದೇನಿದೆ ಪ್ರಶ್ನೆ ಮಾಡಿದರೆ ಸಿಗುವ ಉತ್ತರವೇ ಎಲ್ಲವೂ ಪರಮಾತ್ಮ ಪ್ರಸಾದಿತ ಎಂದು.

ಈ ಜಗದ ಅಸಂಖ್ಯ ರೂಪ, ರಸ, ಗಂಧ, ಶಬ್ದ, ಸ್ಪರ್ಶ- ಇವೆಲ್ಲವನ್ನು ಅನುಭವಿಸುವ, ಆಸ್ವಾದಿಸುವ, ಆನಂದಿಸುವ ನಾವಾರೂ ಮರೆಯಬಾರದ ವಿಷಯವೆಂದರೆ ಕಾಣದವನಿಹನಿಲ್ಲಿ, ಮನುಜ ನಾವಿಕನಿಲ್ಲಿ; ಗೊಂಬೆ ಆಡಿಸಿದಂತೆ ನಾವೆಂಬುದನ್ನು ಮಾತ್ರ. ನಾವು ದೇವಸನ್ನಿಧಿಯಲ್ಲಿ ಧ್ಯಾನಸ್ಥರಾಗಿ ಯಾವ ಲೌಕಿಕಾಸೆಗಳಿಲ್ಲದೆ ಪ್ರಾರ್ಥಿಸುತ್ತಿದ್ದರೆ ಆಗ ಬುದ್ಧಿ ಜಾಗೃತವಿದ್ದು ಹಗುರ ಬಾಳಿನ ಭಾರ ಎಂದಾಗುತ್ತದೆ. ನಮ್ಮ ಬದುಕಿನಲ್ಲಿ ಭಗವಂತನ ಪ್ರೀತಿ, ಕರುಣೆಯ ಹೊರತಾಗಿ ಮತ್ತಾವುದೂ ನಮ್ಮನ್ನು ಕಾಪಾಡದು. ನಮಗಾರ ಸ್ನೇಹ ಎನ್ನುವ ಸನ್ನಿಧಿಸುಖ ಬೇಕೆನುವ ನಿಜದರಿವಿದ್ದರೆ ಭಗವಂತ ನಿಶ್ಚಿತವಾಗಿ ತಥಾಸ್ತು ಎನ್ನುತ್ತಾನೆ. ಇದರಿಂದ ದೈವಕೃಪೆ ಪ್ರಾಪ್ತಿ ಎನುವ ಖುಷಿಯಲ್ಲಿ ಮೇಲೆ ಶುಭ್ರಾಕಾಶ, ಒಳಗೆ ಚಿತ್ತೋಲ್ಲಾಸ ಖಚಿತ. ಇದರಿಂದ ದೈವಕೃಪೆ ಅಸಾಮಾನ್ಯ ಭಾವದಲ್ಲಿ ಬೆರಗಿನಮರತೆ ಸತ್ತ್ವದ ಅಂತರ್ಜ್ಯೋತಿ ಯ ಅರಿವ ನಿಜಬೇಳಗು.

---

# ಸಾವಿಗೆ ಅಂಜದ ಸಾರ್ಥಕ ಜೀವನ

ಸಾರ್ಥಕತೆಯು ಆಯಸ್ಸಿನ ಆಯುಧ. ಗುರಿಯ ಬದುಕು ಮೆದುಳಿನ ಪ್ರಿಫ್ರಂಟಲ್ ಕಾರ್ಟೆಕ್ಸನ್ನು ಪ್ರಜ್ವಲಿಸಿ ಸಿರೊಟೋನಿನ್ ಸ್ಥಿರತೆಯನ್ನು ಕಾಪಾಡುತ್ತದೆ. ಆಗ ಕರುಳಿನ ಚಲನೆ ಕ್ರಮಬದ್ಧವಾಗಿ, ಪೋಷಕಾಂಶಗಳ ಹೀರುವಿಕೆ ಚುರುಕಾಗುತ್ತದೆ. ಕೆನಡಾ ಸಂಶೋಧನೆ ಹೇಳುವಂತೆ ದಿನದ ಯೋಜನೆ ಬರೆದು ಬದುಕುವವರಲ್ಲಿ ಇಂಟರ್ಲ್ಯೂಕಿನ್-6 ಉರಿಯೂತ ಶೇಕಡಾ 24% ಇಳಿದು ಸಂಧಿನೋವು ಕರಗುತ್ತದೆ. ಉದ್ದೇಶವೇ ಔಷಧ.

ಸಾರ್ಥಕತೆಯು ನಾಡಿನ ನಂದಾದೀಪ. ನೇಮಕಾತಿ ಪರೀಕ್ಷೆಗೆ ಉಚಿತವಾಗಿ ರಾತ್ರಿ ಪಾಠ ಮಾಡುವ ಪೊಲೀಸ್ ಪೇದೆ, ಎಷ್ಟೋ ಕನಸುಗಳಿಗೆ ಖಾಕಿ ಭರವಸೆಯಾಗುತ್ತಾನೆ. ಹಳೆಯ ಪುಸ್ತಕಗಳನ್ನು ಜೋಡಿಸಿ ಮನೆಯ ಜಗಲಿಯಲ್ಲೇ ಗ್ರಂಥಾಲಯ ತೆರೆದ ಅಜ್ಜಿ, ಓಣಿಯ ಮಕ್ಕಳಿಗೆ ಅಕ್ಷರದ ಮನೆ ಕಟ್ಟುತ್ತಾಳೆ.



ಕೆರೆದಂಡೆಯ ಪ್ಲಾಸ್ಟಿಕ್ ಹೆಕ್ಕಿ ಸ್ವಚ್ಛಗೊಳಿಸುವ ಕಾಲೇಜು ತಂಡ, ಊರಿಗೆ ನೀರಿನ ಕನ್ನಡಿ ಹಿಂದಿರುಗಿಸುತ್ತದೆ. ಬದುಕಿಗೆ ಬೆಲೆ ತರಲು ಹೀಗೆ ಬಾಳಿ: ಬೆಳಗ್ಗೆ ಎದ್ದು ಮೂರು ಕೃತಜ್ಞತೆಗಳನ್ನು ಬರೆಯಿರಿ. ವಾರಕ್ಕೊಮ್ಮೆ ಒಂದು ಗಿಡಕ್ಕೆ ಕಸಿ ಕಟ್ಟಿ ಬೆಳೆಸಿ. ಹುಣ್ಣಿಮೆಯಂದು ವೃದ್ಧಾಶ್ರಮಕ್ಕೆ ಹೋಗಿ ಒಂದು ಸಂಜೆ ಕಳೆಯಿರಿ. ನಿಮ್ಮ ಹಬ್ಬದೂಟದಲ್ಲಿ ಒಂದು ಪಾತ್ರೆಯನ್ನು ಅಗತ್ಯವಿರುವವರಿಗೆ ಹಂಚಿ.

ಗುರಿ ಇರುವವನಿಗೆ ಅಂತ್ಯವು ಅಂಕವಲ್ಲ, ಅಧ್ಯಾಯ ಮಾತ್ರ. ಅರ್ಥಪೂರ್ಣವಾಗಿ ಬಾಳಿದವನನ್ನು ಮರೆವಿನ ಅಲೆಗಳೂ ಮುಟ್ಟಲಾರವು.

ಅಂಕಣ-37

ಸಾವು ಸಂಕಟಪಡುವ ಸಂಗತಿಗಳು..!



|ಡಾ.ಸುಧಾಕರ.ಜಿ.ಲಕ್ಕವಳ್ಳಿ
87479 69381

---

# ಸೃಷ್ಟಿಯನ್ನು ಸಂಭ್ರಮಿಸುತ್ತೇವೆ ಅಂತ್ಯವನ್ನಲ್ಲ

ಸ್ನೇಹ ಲೋಕ



| ಸ್ನೇಹಾ ಆನಂದ್

ಒಂದು ಸಲ ಯಮರಾಜನಿಗೆ ತನ್ನ ಕೆಲಸ ಯಾಕೋ ವಿಚಿತ್ರ ಬೇಸರ ತರಿಸಿತಂತೆ! ಆಗ ಆತ ಸೃಷ್ಟಿಕರ್ತನಾದ ಬ್ರಹ್ಮದೇವನ ಕಡೆಗೆ ಹೋಗಿ ಹೇಳಿದನಂತೆ, ನೋಡು ಬ್ರಹ್ಮದೇವ ಈ ಕೆಲಸದಿಂದ ನನಗೆ ಬಿಡುಗಡೆಯಂತೂ ಇಲ್ಲ! ಸೃಷ್ಟಿಯನ್ನು ಆದರಿಸುವಂತೆ ಅಂತ್ಯವನ್ನು ಯಾರು ಆದರಿಸುವುದೂ ಇಲ್ಲ, ನೀನು ಒಂದು ಜೀವಿಯನ್ನು ಹುಟ್ಟಿಸುವುದು ನಾನು ಹೋಗಿ ಆ ಜೀವಿಗೆ ಅಂತ್ಯ ಹಾಡುವುದು ಇದೇ ಆಗಿದೆ ನಮ್ಮಿಬ್ಬರ ಕೆಲಸ!

ಇನ್ನು ಮೇಲೆ ಜೀವಿಗಳನ್ನು ಆದಷ್ಟು ಕಡಿಮೆ ಸೃಷ್ಟಿಸು, ಅಂದರೆ ನನಗೂ ಕೂಡ ಸ್ವಲ್ಪ ವಿಶ್ರಾಂತಿ ಸಿಗುತ್ತದೆ, ಇಲ್ಲದಿದ್ದರೆ ನನಗೆ ನಿದ್ದೆ,ನೀರಡಿಕೆ ಇಲ್ಲದೆ ಮೈ,ಮನಸ್ಸು ಸತತವಾದ ಕೆಲಸದಿಂದ ತುಂಬಾ ಬೇಸತ್ತಿದೆ, ಯಾಕಾದರೂ ಈ ಕೆಲಸ ಒಪ್ಪಿಕೊಂಡೆ ಎನ್ನುವಷ್ಟು ನನಗೆ ಕಿರಿಕಿರಿಯಾಗಿದೆ ಎಂದಿನಂತೆ!

ಸರಿ ನಾವಿಬ್ಬರೂ ವೈಕುಂಠಕ್ಕೆ ಹೋಗಿ ಶ್ರೀಹರಿಯನ್ನು ಭೇಟಿಯಾಗಿ ಅವರ



ಸಲಹೆಯನ್ನು ಕೇಳಿ ಬರೋಣ ಎಂದರಂತೆ ಬ್ರಹ್ಮ ದೇವರು!

ನಂತರ ವೈಕುಂಠಕ್ಕೆ ಹೋಗಿ ಶ್ರೀಹರಿಗೆ ನಮಸ್ಕರಿಸಿ ಭೂಲೋಕದ ಒಡೆಯನೇ ಯಮರಾಜರಿಗೊಂದು ಸಮಸ್ಯೆ ಬಂದಿದೆ ಪರಿಹರಿಸು ಎಂದಾಗ!

ಶ್ರೀಹರಿಯು ನಗುತ್ತಾ ಹೇಳು ಯಮರಾಜ ಏನು ನಿನ್ನ ಸಮಸ್ಯೆ ಎಂದು ಕೇಳಿದನು!

ಆಗ ಯಮರಾಜ ನನಗೆ ವಿಶ್ರಾಂತಿ ಸಿಗದಷ್ಟು ಕೆಲಸವಾಗುತ್ತಿದೆ ಪ್ರಭು, ಹೀಗಾಗಿ ನನಗೆ ಸ್ವಲ್ಪ ವಿಶ್ರಾಂತಿ ಬೇಕು ಎಂದನು!

ಹೌದಾ.... ಬ್ರಹ್ಮದೇವ ಸ್ವಲ್ಪ ದಿನ ಸೃಷ್ಟಿ ಕಡಿಮೆ ಮಾಡು, ಆಗ ಇಬ್ಬರಿಗೂ ವಿಶ್ರಾಂತಿ ಸಿಗುತ್ತದೆ ಎಂದಾಗ ನಿಧಾನವಾಗಿ ಸೃಷ್ಟಿಯ ಇಳಿಮುಖವಾಗುತ್ತಾ ಬಂತಂತೆ, ಒಂದು ಕುಟುಂಬದಲ್ಲಿ ಹತ್ತಾರು ಮಕ್ಕಳು ಹುಟ್ಟುವುದು ಕಡಿಮೆಯಾಗಿ ಮೂರು,ನಾಲ್ಕಕ್ಕೆ ಇಳಿತವಾಯಿತಂತೆ, ನಂತರ ಎರಡು ಮಕ್ಕಳಿಗೆ ಬಂದು ನಿಂತಿತಂತೆ, ಹೀಗಾಗಿ ಈ ಕಲಿಯುಗದ ಕುಟುಂಬದಲ್ಲಿ ನಿಧಾನವಾಗಿ ಈಗ ಒಂದೇ ಮಗುವಿಗೆ ಸೃಷ್ಟಿ ಬಂದು ನಿಲ್ಲುತ್ತಿದೆ

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,